



# ಪ್ರತಿ ಮಗುವಿನ ಕೈಯಲ್ಲಿ ಪುಸ್ತಕ

## ಎಂಬ ನಮ್ಮ ಧ್ಯೇಯದ ಸಂಭ್ರಮಾಚರಣೆ

## ವಾರ್ಷಿಕ ವರದಿ 2024 – 25



# ಧ್ಯೇಯದ
# 20
# ವರ್ಷಗಳು



# ಪ್ರತಿಫಲನಗಳು

ಓದು ಒಂದು ಮೂಲಭೂತ ಕೌಶಲ, ಸಾಮರ್ಥ್ಯದ ಆಧಾರಸ್ತಂಭ. ಮಕ್ಕಳ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತದೆ. ಶಾಲೆಯಲ್ಲಿ ಅವರು ಸಾಧಿಸಬೇಕು ಎಂದಿಕೊಂಡಿದ್ದರತ್ತ ಕರೆದುಕೊಂಡು ಹೋಗುತ್ತದೆ. ಓದುವ ಸಾಮರ್ಥ್ಯವು ಬೇರೆ ಪ್ರತಿಯೊಂದು ವಿಷಯವನ್ನು ಚೆನ್ನಾಗಿ ಗ್ರಹಿಸುವಂತೆ ಮಾಡುತ್ತದೆ. ಜನವರಿ 1, 2004ರಂದು, ನಾವು 'ಪ್ರತಿ ಮಗುವಿನ ಕೈಯಲ್ಲಿ ಪುಸ್ತಕ' ಎಂಬ ಧ್ಯೇಯದೊಂದಿಗೆ ಪ್ರಥಮ್ ಬುಕ್ಸ್ ಅನ್ನು ಸಾರ್ವಜನಿಕ ದತ್ತಿ ಟ್ರಸ್ಟ್ ಆಗಿ ನೋಂದಾಯಿಸಿದ್ದೇವೆ.

ಈ ಗುರಿಯ ಅರ್ಥವೇನೆಂದರೆ; ಸ್ಥಳೀಯವಾಗಿ ಪ್ರಸ್ತುತವಾದ ವಿಷಯವನ್ನು ಹೊಂದಿರುವ ಆಕರ್ಷಕ ಪುಸ್ತಕಗಳು. ಕಡಿಮೆ ಆದಾಯ ಹೊಂದಿರುವವರೂ ಖರೀದಿಸಬಹುದಾದ ಅತೀ ಕಡಿಮೆ ಬೆಲೆಯ ಪುಸ್ತಕಗಳು ಅಥವಾ ಗ್ರಂಥಾಲಯ, ಎನ್‌ಜಿಒ, ರಾಜ್ಯ ಶಿಕ್ಷಣ ಇಲಾಖೆಗಳ ಮೂಲಕ ಪುಸ್ತಕಗಳು ಖಚಿತವಾಗಿ ಲಭ್ಯವಾಗುವ ಮಾರ್ಗಗಳನ್ನು ನಾವು ಕಂಡುಕೊಳ್ಳುವ ಅಗತ್ಯ ಎಂದು.

ಸಾಗಿ ಬಂದ ಇಷ್ಟೂ ವರ್ಷಗಳಲ್ಲಿ, ಇದನ್ನು ಸಾಧ್ಯವಾಗಿಸಲು ನಾವು ಹಲವಾರು ಮಾರ್ಗಗಳಲ್ಲಿ ಪ್ರಯತ್ನಿಸಿದ್ದೇವೆ:

- ನಾವು ಭಾರತದ ಬಹು ಭಾಷೆಗಳಲ್ಲಿ ಪುಸ್ತಕಗಳನ್ನು ಮುದ್ರಿಸುತ್ತಿರುವುದರಿಂದ (ಮುಂದೆಯೂ ಮುದ್ರಿಸುವುದರಿಂದ) ಉತ್ಪಾದನಾ ವೆಚ್ಚವನ್ನು ಹೇಗೆ ಕಡಿಮೆ ಮಾಡುವುದು ಎಂಬುದನ್ನು ಕಂಡುಹಿಡಿಯಲು ಮುದ್ರಕರ ಜೊತೆಗೆ ತುಂಬಾ ನಿಕಟವಾಗಿ ಕೆಲಸ ಮಾಡಿದ್ದೇವೆ.

- ಮಡಿಸಿ ಗೋಡೆಗೆ ತೂಗು ಹಾಕಬಹುದಾದ ಕಿಟ್, ರೀಡಿಂಗ್ ಕಾರ್ಡ್‌ಗಳಿಂದ, ಪುಸ್ತಕಗಳವರೆಗೆ; ತ್ಯಾಜ್ಯವನ್ನು (ಜೊತೆಗೆ ವೆಚ್ಚವನ್ನು) ಕಡಿಮೆ ಮಾಡಲು ಸೂಕ್ತ ಕಾಗದ, ಅದರ ವಿನ್ಯಾಸ ಸೇರಿದಂತೆ ಅನೇಕ ಅಂಶಗಳನ್ನು ನಾವು ಪ್ರಯತ್ನಿಸಿದ್ದೇವೆ.

- ಸ್ಮಾರ್ಟ್‌ಫೋನ್ - ಟ್ಯಾಬ್ಲೆಟ್‌ಗಳಂತಹ ಡಿಜಿಟಲ್ ಸಾಧನಗಳ ಆಗಮನ ಮತ್ತು ಪ್ರಸರಣದೊಂದಿಗೆ, ನಮ್ಮ ವಿಷಯವನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಲು ಕೆಲಸ ಮಾಡಬೇಕಾಯಿತು. ಇದಕ್ಕಾಗಿ ನಾವು ನಮ್ಮ ಸ್ಟೋರಿವೀವರ್ ಪ್ಲಾಟ್‌ಫಾರ್ಮ್‌ನಲ್ಲಿ ಗಮನಾರ್ಹವಾಗಿ ಜೊತೆಗೆ ಅಷ್ಟೇ ಉತ್ತಮವಾಗಿ ಕೆಲಸ ಮಾಡಿದ್ದೇವೆ.

ಈ ಪ್ರಯತ್ನಗಳು ಎರಡು ನಿರ್ಣಾಯಕ ಸಂಗತಿಗಳನ್ನು ಬಲಪಡಿಸಿದವು: ಇದು "ಒಂದು ಮಗುವನ್ನು ಬೆಳೆಸಲು ಇಡೀ ಊರೇ ಬೇಕು," ಎಂಬ ಹಳೆಯ ಗಾದೆಯ ಮಾರ್ಪಡಿಸಿದ ಆವೃತ್ತಿಯಾಗಿದೆ. ಸರ್ಕಾರ್, ಸಮಾಜ ಮತ್ತು ಬಜಾರ್ ನಡುವೆ ಸಹಯೋಗವಿದ್ದರೆ ಕಟ್ಟ ಕಡೆಯ ಮಗುವಿನ ಕೈಗೆ ಕೂಡ ಪುಸ್ತಕಗಳು ಸಿಗಲು ಸಾಧ್ಯವಿದೆ ಎಂಬುದೇ ಆ ಮಾರ್ಪಾಡು. ಇದಕ್ಕೆ ಉತ್ತಮ ಉದಾಹರಣೆಯೆಂದರೆ 2008ರಲ್ಲಿ ಬಿಹಾರ ರಾಜ್ಯ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುವಾಗ, ನಾವು ಒಟ್ಟು 49 ದಿನಗಳಲ್ಲಿ ಬಿಹಾರದಾದ್ಯಂತ ಸುಮಾರು 54,000 ಶಾಲೆಗಳಿಗೆ 3.75 ಮಿಲಿಯನ್ ಪುಸ್ತಕಗಳು ಮತ್ತು 3.75 ಮಿಲಿಯನ್ ಸ್ಟೋರಿ ಕಾರ್ಡ್‌ಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ. ಈ ಮೂಲಕ ಸುಮಾರು 5.5 ಮಿಲಿಯನ್ ಮಕ್ಕಳನ್ನು ತಲುಪಿದ್ದೇವೆ.

ಇಂದಿನ ಇಂಟರ್ನೆಟ್ ಯುಗದಲ್ಲಿ ಇದನ್ನು ಸುಲಭದ ಕೆಲಸವೆಂದು ಪರಿಗಣಿಸಬಹುದು. ಆದರೆ, ಆಗ ಇದ್ದ ಸವಾಲುಗಳೇ ಬೇರೆ. ಪ್ರಥಮ್ ಬುಕ್ಸ್ ಇಂತಹ ಸಂಕೀರ್ಣ ಕಾರ್ಯವನ್ನು ಯೋಜಿಸುವಲ್ಲಿ ಮತ್ತು ಕಾರ್ಯಗತಗೊಳಿಸುವಲ್ಲಿ ತನ್ನ ತಾಳ್ಮೆ ಮತ್ತು ಬದ್ಧತೆಯನ್ನು ತೋರಿಸಿತು, ಅದು ಕೂಡ ಒಂದು ಸಣ್ಣ ತಂಡದೊಂದಿಗೆ!

ತಂತ್ರಜ್ಞಾನದ ಯುಗದ ವೇಗಕ್ಕೆ ತಕ್ಕಂತೆ 'ಮಿಸ್ಡ್ ಕಾಲ್ ಕೊಡಿ, ಕತೆ ಕೇಳಿ'ಯಂತಹ ಹೊಸ ಮಾದರಿಗಳನ್ನು ಮತ್ತು ಸ್ಟೋರಿವೀವರ್‌ನಂತಹ ಹೆಚ್ಚು ಸಂಕೀರ್ಣವಾದ (ಆದರೆ, ಬಳಸಲು ಸರಳವಾದ) ವೇದಿಕೆಗಳನ್ನು ನಾವು ಪ್ರಾರಂಭಿಸಿದ್ದೇವೆ.

ಲೇಖಕರು, ಇಲ್ಲಸ್ಟ್ರೇಟರ್ಸ್, ಕಂಟೆಂಟ್ ಮತ್ತು ವಿತರಣಾ ವ್ಯವಸ್ಥೆಗಳ ಅದ್ಭುತ ಪರಿಸರ ವ್ಯವಸ್ಥೆಯನ್ನು ನಾವು ನಿರ್ಮಿಸಿದ್ದೇವೆ. ಪ್ರತಿ ವರ್ಷ ಹಲವಾರು ಮಿಲಿಯನ್ ಬಹುಶಃ ಹತ್ತು ಮಿಲಿಯನ್ ಮಕ್ಕಳನ್ನು ತಲುಪಲು ಸಿದ್ಧರಿದ್ದೇವೆ. ಇದು ನಮ್ಮನ್ನು ಮುಂದಿನ ಹಂತದ ಪ್ರಶ್ನೆಗಳ ಬಳಿ ತಂದು ನಿಲ್ಲಿಸುತ್ತದೆ - ಈ ಅದ್ಭುತ ಪ್ರಯತ್ನದ ಪರಿಣಾಮ ಏನು?

ನಿಜವಾಗಿಯೂ ನಾವು ಈ ಪರಿಣಾಮವನ್ನು ಪರಿಮಾಣೀಕರಿಸುವುದು ಹೇಗೆ (anecdotal ದತ್ತಾಂಶವನ್ನು ಮೀರಿ)? ನಾವು ಈ ದಿಕ್ಕಿನಲ್ಲಿ ಹೆಜ್ಜೆಗಳನ್ನು ಹಾಕಲು ಪ್ರಾರಂಭಿಸಿದ್ದೇವೆ. ಇದು ಮುಂದಿನ ಕೆಲವು ವರ್ಷಗಳು ಪ್ರಥಮ್ ಬುಕ್ಸ್‌ಗೆ ಒಂದು ರೋಮಾಂಚಕಾರಿ ಹಂತವಾಗಲಿದೆ ಎಂದು ಭರವಸೆ ನೀಡಿದೆ. ತಂಡವು ಈ ಸವಾಲನ್ನು ಸ್ವೀಕರಿಸಲು ಸಿದ್ಧವಾಗಿದೆ ಮತ್ತು ರಾಜ್ಯ ಸರ್ಕಾರ, ಕೊಡುಗೈ ದಾನಿಗಳು ಹಾಗೂ ಇತರ ಲಾಭರಹಿತ ಸಂಸ್ಥೆಗಳೊಂದಿಗೆ ಮತ್ತು ಒಟ್ಟಾರೆಯಾಗಿ ಸಮುದಾಯಗಳೊಂದಿಗೆ ಸಹಕರಿಸಲು ಸಿದ್ಧವಾಗಿದೆ. ಇದನ್ನು ಸಾಧಿಸಲು ನಾವು ಅನೇಕ ಯೋಜನೆಗಳನ್ನು ವಿನ್ಯಾಸಗೊಳಿಸಿದ್ದೇವೆ. ಸ್ಥಾಪಕ ಟ್ರಸ್ಟಿಯಾಗಿ, ಈ ಪ್ರಯತ್ನಗಳ ಫಲಿತಾಂಶಗಳನ್ನು ನೋಡಲು ನಾನು ಕಾತರದಿಂದ ಕಾಯುತ್ತಿದ್ದೇನೆ.

- ಅಶೋಕ್ ಕಾಮತ್, ಸ್ಥಾಪಕ ಟ್ರಸ್ಟಿ, ಪ್ರಥಮ್ ಬುಕ್ಸ್.

ಪ್ರಥಮ್‌ನಲ್ಲಿ ನಮ್ಮಲ್ಲಿ ಕೆಲವರು ಮಕ್ಕಳ ಸಾಹಿತ್ಯದಲ್ಲಿರುವ ದೊಡ್ಡ ಕೊರತೆಗಳನ್ನು ತುಂಬಲು ಮಕ್ಕಳ ಪ್ರಕಾಶನ ಘಟಕವನ್ನು ಸ್ಥಾಪಿಸಲು ನಿರ್ಧರಿಸಿದಾಗ; ನಾನು, ಅಶೋಕ್ ಕಾಮತ್ ಮತ್ತು ರೇಖಾ ಮೆನನ್ ಅವರನ್ನು ಸ್ಥಾಪಕ ತಂಡದಲ್ಲಿ ಸೇರಲು ವಿನಂತಿಸಿದೆ. ನಾವೆಲ್ಲ ಒಟ್ಟಾಗಿ 2004ರ ಜನವರಿ 1ರಂದು ಪ್ರಥಮ್ ಬುಕ್ಸ್‌ನ್ನು ಸ್ಥಾಪಿಸಿ, ಭಾರತೀಯ ಭಾಷೆಗಳಲ್ಲಿ ಹಾಗೂ ಸ್ಥಳೀಯ ವಿಷಯಗಳೊಂದಿಗೆ ಅದ್ಭುತ ಮತ್ತು ವೈವಿಧ್ಯಮಯ ಪುಸ್ತಕಗಳನ್ನು ಸೃಷ್ಟಿಸುವ ಮೂಲಕ ಎಲ್ಲಾ ಮಕ್ಕಳಿಗೂ ಓದಿನ ಆನಂದವನ್ನು ತಲುಪಿಸುವ ಗುರಿ ಹೊಂದಿದ್ದೇವೆ ಮತ್ತು ನಾವು ಅದನ್ನು ಸಾಧಿಸಿದ್ದೇವೆ!

- ರೋಹಿಣಿ ನಿಲೇಕಣಿ, ಸಹ-ಸಂಸ್ಥಾಪಕಿ

ಭಾರತದ ಮಕ್ಕಳಿಗೆ ಕತೆಗಳ ಆನಂದವನ್ನು ಒದಗಿಸುವ ನಮ್ಮ ಮಹತ್ವಾಕಾಂಕ್ಷೆಯ ದೃಷ್ಟಿಕೋನದಿಂದ ಹಿಡಿದು, ಎರಡು ದಶಕಗಳಿಂದ ಸ್ಥಳೀಯವಾಗಿ ಪ್ರಸ್ತುತವಾದ ವಿಷಯದೊಂದಿಗೆ ಕೈಗೆಟುಕುವ, ಉತ್ತಮ ಗುಣಮಟ್ಟದ ಕತೆ ಪುಸ್ತಕಗಳು ಮತ್ತು ಕಾರ್ಡ್‌ಗಳನ್ನು ವಿತರಿಸುವ ಅತ್ಯುತ್ತಮ ವಾಸ್ತವದವರೆಗೆ, ಸಾಮಾಜಿಕ ಹಿತ ಮತ್ತು ವ್ಯಾಪ್ತಿಗಾಗಿ ತಂತ್ರಜ್ಞಾನವನ್ನು ಶೀಘ್ರವಾಗಿ ಬಳಸುವ ಶಕ್ತಿಯನ್ನು ಗುರುತಿಸುವುದರಿಂದ ಹಿಡಿದು, ಲಕ್ಷಾಂತರ ಓದುಗರೊಂದಿಗೆ ಮತ್ತು ಅನೇಕ ಭಾಷೆಗಳೊಂದಿಗೆ ಜಗತ್ತಿನಾದ್ಯಂತ ತಲುಪುವವರೆಗೆ ಇದು ಅಚ್ಚರಿದಾಯಕ ಪ್ರಯಾಣವಾಗಿದೆ. ಈ ಕನಸನ್ನು ಸಾಧ್ಯವಾಗಿಸಿದ ಮತ್ತು ಕಳೆದ 20 ವರ್ಷಗಳ ಪಯಣವನ್ನು ಸಾಗಿಸಿದ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು — ಲಕ್ಷಾಂತರ ಮಕ್ಕಳು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾರೆ!

- ರೇಖಾ ಮೆನನ್, ಸಹ-ಸಂಸ್ಥಾಪಕಿ



ಒಂದು ಗುಂಪಾಗಿ ಮತ್ತು ಒಬ್ಬ ವ್ಯಕ್ತಿಯಾಗಿ, ನಾನು ಪ್ರತಿ ಬಾರಿ ಹೊಸ ಕಲ್ಪನೆ ಅಥವಾ ಹೊಸ ಬದಲಾವಣೆಯನ್ನು ನಮ್ಮ ಧ್ಯೇಯದ ಮೂಲ ಉದ್ದೇಶವಾದ; ಅಗತ್ಯವಿರುವ ಹೆಚ್ಚಿನ ಮಕ್ಕಳಿಗೆ ಹೆಚ್ಚಿನ ಪುಸ್ತಕಗಳನ್ನು ತಲುಪಿಸುತ್ತದೆಯೇ? ಹೆಚ್ಚಿನ ಮಕ್ಕಳು ಓದಲು ಪ್ರಾರಂಭಿಸಲು ಇದು ಸಹಾಯ ಮಾಡುತ್ತದೆಯೇ? ಓದುವ ಮಾಧ್ಯಮದ ಮೂಲಕ ಮಕ್ಕಳಿಗೆ ಬಾಗಿಲು ತೆರೆಯುತ್ತದೆಯೇ? ಎನ್ನುವ ಮೌಲ್ಯಮಾಪನದ ಮೂಲಕವೇ ಬಂದಿದೆ. ನಾವು ಮಾಡಲು ಹೊರಟಿರುವುದು ಇದನ್ನೇ ಮತ್ತು ನಾವು ಯಾವಾಗಲೂ ಇದನ್ನೇ ಮಾಡುತ್ತೇವೆ. ಮುಂದಿನ ಕೆಲವು ದಶಕಗಳಲ್ಲಿ, ಪುಸ್ತಕಗಳು ಬದಲಾಗುತ್ತವೆ ಹಾಗೆಯೇ ಅವು ತಮ್ಮ ಓದುಗರನ್ನು ತಲುಪುವ ವಿಧಾನಗಳೂ ಬದಲಾಗುತ್ತವೆ. ಆದರೆ, ಪುಸ್ತಕ ಮತ್ತು ಓದುಗರ ನಡುವಿನ ಮಾಂತ್ರಿಕತೆಯನ್ನು ಪದಗಳು ಮತ್ತು ಚಿತ್ರಗಳು ಮಾತ್ರ ಸೃಷ್ಟಿಸಬಲ್ಲವು - ಅದು ನಮಗೆ ಮಾರ್ಗದರ್ಶನ ನೀಡುತ್ತಲೇ ಇರುತ್ತದೆ.

- ಸುರ್ಯೋನ್ ಸಿಂಗ್, ಮಾಜಿ ಚೇರ್ ಪರ್ಸನ್ ಮತ್ತು ಟ್ರಸ್ಟಿ

ಕಳೆದ ಎರಡು ದಶಕಗಳಲ್ಲಿ, ಪ್ರಥಮ್ ಬುಕ್ಸ್ ಮಕ್ಕಳ ಪುಸ್ತಕಗಳ ಜಗತ್ತಿನಲ್ಲಿ ತನ್ನ ಹೊಸತನದ ಮೂಲಕ ಬದಲಾವಣೆಯ ಶಕ್ತಿಯಾಗಿ ಬೆಳೆದಿದೆ. ನಮ್ಮ ಬದ್ಧತೆ ಎಂದರೆ ಉನ್ನತ ಗುಣಮಟ್ಟದ, ಕಡಿಮೆ ವೆಚ್ಚದ, ಬಹುಭಾಷಾ ಪುಸ್ತಕಗಳನ್ನು ಪ್ರತಿಯೊಂದು ಮಗುವಿಗೂ—ಅವರ ಹಿನ್ನೆಲೆ ಅಥವಾ ಪರಿಸ್ಥಿತಿಯನ್ನು ಪರಿಗಣಿಸದೆ—ವಿವಿಧ ಮಾದರಿ ಮತ್ತು ಮಾರ್ಗಗಳ ಮೂಲಕ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು. ಇದರಿಂದ ಭಾರತದೆಲ್ಲೆಡೆ ಮತ್ತು ಜಗತ್ತಿನಾದ್ಯಂತ ದೊಡ್ಡ ಮಟ್ಟದ ಲಭ್ಯತೆ ಮತ್ತು ಪ್ರಭಾವ ಉಂಟಾಗಿದೆ.

ಬಹುಭಾಷಾ ಕತೆಗಳು -ಸಹಾನುಭೂತಿಯನ್ನು ಬೆಳೆಸಲು, ಕಲ್ಪನೆ ಮತ್ತು ಓದುವ ಪ್ರೀತಿಯನ್ನು ಹುಟ್ಟುಹಾಕಲು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ನಾವು ನೋಡಿದ್ದೇವೆ. ಇದು ಆಳವಾದ ಗುಣಾತ್ಮಕ ಪರಿಣಾಮಗಳನ್ನು ಬೀರುತ್ತದೆ. ಈ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ, ನಮ್ಮ ಧ್ಯೇಯವನ್ನು ಮುನ್ನಡೆಸಲು ಸಹಾಯ ಮಾಡಿದ ಲೇಖಕರು, ಚಿತ್ರಕಾರರು, ಅನುವಾದಕರು, ಸ್ವಯಂಸೇವಕರು, ಪಾಲುದಾರರು, ದಾನಿಗಳು ಮತ್ತು ಬೆಂಬಲಿಗರ ಸಮುದಾಯವನ್ನು ನಾವು ಗುರುತಿಸುತ್ತೇವೆ, ಪ್ರಶಂಸಿಸುತ್ತೇವೆ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇವೆ. ಲಕ್ಷಾಂತರ ಮಕ್ಕಳನ್ನು, ವಿಶೇಷವಾಗಿ ಸೌಲಭ್ಯ ವಂಚಿತ ಮಕ್ಕಳನ್ನು ತಲುಪಲು ಮತ್ತು ಅವರನ್ನು ಪ್ರಭಾವಿಸಲು ನಮಗೆ ಅನುವು ಮಾಡಿಕೊಟ್ಟಿದ್ದು ನಿಮ್ಮ ನಿರಂತರ ಬೆಂಬಲ.

- ಆರ್ ಶ್ರೀರಾಮ್, ಚೇರ್ ಪರ್ಸನ್

## ಪ್ರತಿ ಮಗುವಿಗೂ ಓದುವ ಸಂಸ್ಕೃತಿ ನಿರ್ಮಿಸುವ

# ಇಪ್ಪತ್ತು ವರ್ಷಗಳು



ಮಕ್ಕಳಿಗೆ ಅವರದೇ ಭಾಷೆಗಳಲ್ಲಿ ಕೈಗೆಟುಕುವ, ಉತ್ತಮ ಗುಣಮಟ್ಟದ ಪುಸ್ತಕಗಳ ಕೊರತೆ, ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ಮೀರಿ ಏನೂ ಇರಲಿಲ್ಲ ಮತ್ತು ಸಮುದಾಯಗಳು ಓದುವ ಅಭ್ಯಾಸವನ್ನು ಬೆಳೆಸಲು ಸೀಮಿತ ಮೂಲಸೌಕರ್ಯವನ್ನು ಹೊಂದಿದ್ದವು: ಈ ಮೂರು ಪ್ರಮುಖ ಅಂತರಗಳನ್ನು ಪರಿಹರಿಸಲು ನಾವು ಪ್ರಥಮ್ ಬುಕ್ಸ್ ಮೂಲಕ ಭಾರತದ ಪ್ರತಿ ಮಗುವಿಗೂ ಸಂತೋಷದ ಓದು ಲಭ್ಯವಾಗುವಂತೆ ಮಾಡಲು ಪ್ರಾರಂಭಿಸಿದೆವು

ಆದ್ದರಿಂದ, ನಾವು ವಿಷಯಗಳನ್ನು ಬದಲಾಯಿಸಲು ಹೊರಟೆವು.



ಕಳೆದ 20 ವರ್ಷಗಳಲ್ಲಿ, ಈ ಪ್ರಯಾಣವು
ನಮ್ಮನ್ನು ಬಿಹಾರದ ಜಿಲ್ಲಾ ಕಚೇರಿಗಳಿಂದ
ಮಣಿಪಾಲದ ಪ್ರಿಂಟಿಂಗ್ ಪ್ರೆಸ್‌ಗಳಿಗೆ,
ಪೂರ್ವದ ಗಾರೋ ಹಿಲ್ಸ್‌ನಿಂದ ಪಶ್ಚಿಮದ ರಣ್ ಆಫ್ ಕಚ್‌ವರೆಗೆ ಕರೆದೊಯ್ಯಿತು.

ಈ ದೀರ್ಘ ಪ್ರಯಾಣದ ಉದ್ದಕ್ಕೂ, ಓದಲು ಇಷ್ಟಪಡುವ ಭಾರತಕ್ಕಾಗಿ ನಮ್ಮ ಕೆಲಸವನ್ನು ಮೂರು ಮಾರ್ಗದರ್ಶಿ ತತ್ವಗಳು ಬೆಂಬಲಿಸಿವೆ. ಮುಖಗಳು, ಸ್ಥಳಗಳು ಮತ್ತು ಕತೆಗಳು:

1. **ಸೃಷ್ಟಿ:** ಪ್ರಥಮ್ ಬುಕ್ಸ್‌ನ ಕ್ಯಾಟಲಾಗ್ 7,000ಕ್ಕೂ ಹೆಚ್ಚು ಶೀರ್ಷಿಕೆಗಳನ್ನು ಒಳಗೊಂಡಿದೆ. ಇದು ಭಾರತೀಯ ಲೇಖಕರ ಭಾರತೀಯ ಕತೆಗಳನ್ನು ಒಳಗೊಂಡಿದೆ - ಮಕ್ಕಳು ಕನಸು ಕಾಣಲು, ಕಲಿಯಲು ಮತ್ತು ಅಭಿವೃದ್ಧಿ ಹೊಂದಲು ಸಹಾಯ ಮಾಡುವ ಕತೆಗಳು.

2. **ಲಭ್ಯತೆ:** ಕತೆಗಳ ಮೂಲಕ ಪ್ರತಿ ಮಗುವನ್ನು ತಲುಪಲು, ತಲುಪುವ ವ್ಯಾಪ್ತಿಯನ್ನು ವಿಸ್ತರಿಸಲು ನಾವು ಸರ್ಕಾರಿ ವ್ಯವಸ್ಥೆಗಳೊಂದಿಗೆ, ಸಮುದಾಯ ಜಾಲಗಳೊಂದಿಗೆ, ವಿತರಣೆಯನ್ನು ಉಳಿಸಿಕೊಳ್ಳಲು ಮತ್ತು ವಿತರಣೆಯನ್ನು ವಿಸ್ತರಿಸಲು ಹಂತಹಂತವಾಗಿ ಕೆಲಸ ಮಾಡುತ್ತೇವೆ.

3. **ಬಳಕೆ:** ಕಲಿಕೆಯ ಅಂತರವನ್ನು ಕಡಿಮೆ ಮಾಡಲು, ನಮ್ಮ ಚಿತ್ರ ಪುಸ್ತಕಗಳ ವಿಶಾಲ ಸಂಗ್ರಹವನ್ನು ಬಳಸಿಕೊಂಡು ನಾವು ಕತೆ ಆಧಾರಿತ ಕಾರ್ಯಕ್ರಮಗಳನ್ನು ರಚಿಸುತ್ತೇವೆ.



# 2004 - 2014

## ಪ್ರತಿ ಮಗುವಿಗೂ ಕೈಗೆಟುಕುವ, ಬಹುಭಾಷಾ ಕತೆಗಳಿಗಾಗಿ ದಾರಿಗಳನ್ನು ನಿರ್ಮಿಸುವುದು

ನಮ್ಮ ಮೊದಲ ದಶಕದಲ್ಲಿ, ನಾವು ಕೈಗೆಟುಕುವ ಪ್ರಕಾಶನ ಮಾದರಿ, ಬಹುಭಾಷಾ ರಚನೆಗೊಂದು ಮಾರ್ಗ ಮತ್ತು ರಾಜ್ಯದಾದ್ಯಂತ ವಿತರಣೆಯನ್ನು ಸರಿಯಾಗಿ ಕಾರ್ಯಗತಗೊಳಿಸುವ ಕಾರ್ಯಾಚರಣೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿದ್ದೇವೆ.

- 2006ರ ಹೊತ್ತಿಗೆ, ಹಿಂದಿ, ಬೆಂಗಾಲಿ, ಗುಜರಾತಿ, ಅಸ್ಸಾಮಿ, ಬೋಡೋ, ತಮಿಳು, ಉರ್ದು ಮತ್ತು ಪಂಜಾಬಿಯಂತಹ ಭಾಷೆಗಳಲ್ಲಿ ಸುಮಾರು ಹತ್ತು ಮಿಲಿಯನ್ ಸ್ಟೋರಿಕಾರ್ಡ್‌ಗಳನ್ನು ಭಾರತದಾದ್ಯಂತ ವಿತರಿಸಲಾಯಿತು.
- 2008ರಲ್ಲಿ, ಬಿಹಾರ ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಬಿಹಾರದಾದ್ಯಂತ ಒಟ್ಟು 49 ದಿನಗಳಲ್ಲಿ ಸುಮಾರು 54,000 ಶಾಲೆಗಳ 5.5 ಮಿಲಿಯನ್ ಮಕ್ಕಳಿಗೆ 3.75 ಮಿಲಿಯನ್ ಪುಸ್ತಕಗಳು ಮತ್ತು 3.75 ಮಿಲಿಯನ್ ಸ್ಟೋರಿ ಕಾರ್ಡ್‌ಗಳನ್ನು ತಲುಪಿಸಿದೆವು.
- 2012ರ ಹೊತ್ತಿಗೆ, ನಮ್ಮ ಚಿತ್ರ ಪುಸ್ತಕಗಳು 21 ರಾಜ್ಯಗಳನ್ನು ತಲುಪುತ್ತಿದ್ದವು - ಲಡಾಖ್‌ನಲ್ಲಿರುವ ಸಮುದಾಯ ಕೇಂದ್ರಗಳು, ಅಸ್ಸಾಂ-ಮೇಘಾಲಯದ ಚಹಾ ತೋಟಗಳು, ಗುಜರಾತ್-ಮಧ್ಯಪ್ರದೇಶ, ಕರ್ನಾಟಕ ಮತ್ತು ಜಾರ್ಖಂಡ್‌ನ ಗ್ರಾಮೀಣ ಸರ್ಕಾರಿ ಶಾಲೆಗಳು.

### ಚಿತ್ರ ಪುಸ್ತಕಗಳ ಮೂಲಕ ಹವಾಮಾನ ಯೋಧರಿಗೆ (climate warriors) ಸ್ಫೂರ್ತಿ ನೀಡುವುದು.

ನಮ್ಮ ಮೊದಲ ಹಸಿರು-ಸಾಹಿತ್ಯ ಶೀರ್ಷಿಕೆ, ಕಾವೇರಿ (2009), ಇದನ್ನು ಓರಿಯೊಲ್ ಹೆನ್ರಿ ಬರೆದಿದ್ದು, ಕ್ಲೇರ್ ಅರ್ನಿ ಅವರ ಛಾಯಾಚಿತ್ರಗಳೊಂದಿಗೆ, ಚಿತ್ರ ಪುಸ್ತಕಗಳು ಗೃಹವೊಂದರ ಕೆಲಸಕ್ಕೆ ಹೇಗೆ ಪ್ರೇರೇಪಿಸಬಹುದು ಎಂಬುದನ್ನು ತೋರಿಸಿದೆ. ಈ ಪುಸ್ತಕವು ರಾಷ್ಟ್ರವ್ಯಾಪಿ "ನಮ್ಮ ನದಿಗಳನ್ನು ಉಳಿಸಿ, ನೀರನ್ನು ಉಳಿಸಿ" ಅಭಿಯಾನವನ್ನು ಪ್ರಾರಂಭಿಸಿತು, ಇದರ ಪರಿಣಾಮವಾಗಿ ಜಲ ಸಂಪನ್ಮೂಲಗಳನ್ನು ರಕ್ಷಿಸಲು 1,22,000 ಪ್ರತಿಜ್ಞೆಗಳು ಬಂದವು.

### ಜೀವಂತ ಅನುಭವಗಳ ಕತೆಗಳನ್ನು ಸಂರಕ್ಷಿಸುವುದು

'ಆದಿಕಹಾನಿ' ಸರಣಿಯೊಂದಿಗೆ ಪ್ರಥಮ್ ಬುಕ್ಸ್ ಮೊದಲ ಬಾರಿಗೆ ಬುಡಕಟ್ಟು ಭಾಷೆಗಳ ಕ್ಷೇತ್ರಕ್ಕೆ ಕಾಲಿಟ್ಟಿತು; ಒಡಿಸ್ಸಾದ ಬುಡಕಟ್ಟು ಸಮುದಾಯಗಳೊಂದಿಗೆ ನಡೆಸಿದ ಕಾರ್ಯಾಗಾರಗಳ ಮೂಲಕ 10 ಪುಸ್ತಕಗಳು ಮತ್ತು 4 ಹಾಡಿನ ಕಾರ್ಡ್‌ಗಳನ್ನು ತಯಾರಿಸಲಾಯಿತು.

ಸೌರಾ ಶೈಲಿಯಲ್ಲಿ ಚಿತ್ರಿಸಲ್ಪಟ್ಟ ಮತ್ತು ಕಂಟೆಂಟ್ ಪಾಲುದಾರ Ignus ERGಯೊಂದಿಗೆ ಅಭಿವೃದ್ಧಿಪಡಿಸಲಾದ ಈ ಸರಣಿಗೆ Publishing Innovation of the Year Award 2015 ನೀಡಲಾಯಿತು.



ನಮ್ಮ ಕೆಲಸ ಮುಂದುವರಿದಂತೆ, ಕೇವಲ ಕತೆಗಳನ್ನು ರಚಿಸುವುದು ಸಾಕಾಗುವುದಿಲ್ಲ ಎನ್ನುವುದು ನಮಗೆ ಅರಿವಾಯಿತು - ಕತೆಗಳು ಭೌಗೋಳಿಕ ಗಡಿಗಳು, ಭಾಷೆಗಳು, ವ್ಯವಸ್ಥೆಗಳು ಮತ್ತು ಸಮುದಾಯಗಳನ್ನು ತಲುಪಬೇಕು.

2014ರಲ್ಲಿ, ನಾವು ಡಿಜಿಟಲ್ ಮೂಲಸೌಕರ್ಯ ಮತ್ತು ಸಮುದಾಯ ಭಾಗವಹಿಸುವಿಕೆಯ ಮೂಲಕ ಕತೆ ಪುಸ್ತಕಗಳು ಎಲ್ಲರಿಗೂ ಲಭ್ಯವಾಗುವಂತೆ ಹೊಸ ಮಾರ್ಗಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದೇವೆ. ಇದು ಎರಡು ಗಮನಾರ್ಹ ಉಪಕ್ರಮಗಳಿಗೆ ಕಾರಣವಾಯಿತು:

ನಮ್ಮ ಕ್ರೌಡ್‌ಫಂಡಿಂಗ್ ವೇದಿಕೆಯಾದ ಡೊನೇಟ್-ಎ-ಬುಕ್; ಗ್ರಂಥಾಲಯಗಳ ಅಗತ್ಯವಿರುವ ಸಮುದಾಯಗಳನ್ನು - ಸಹಾಯ ಮಾಡಲು ಸಿದ್ಧರಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳೊಂದಿಗೆ ಸಂಪರ್ಕಿಸುತ್ತದೆ.

ಮೊದಲ ವರ್ಷದಲ್ಲೇ, ಸುಮಾರು 50,000 ಪುಸ್ತಕಗಳನ್ನು ವಿತರಿಸಲು ಹಣವನ್ನು ಸಂಗ್ರಹಿಸಲು ಸಹಾಯ ಮಾಡಿತು. ಇದು ದೇಶದ ದೂರದ ಪ್ರದೇಶಗಳಲ್ಲಿ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಮಕ್ಕಳ ಮೇಲೆ ಪರಿಣಾಮ ಬೀರಿತು. ಗ್ರಾಮೀಣ ತಮಿಳುನಾಡಿನ ‘ಇರುಳ; ಬುಡಕಟ್ಟಿನ ಹುಡುಗಿಯರಿಗಾಗಿ ಸ್ವಯಂಸೇವಕರು ದೇಣಿಗೆ ಸಂಗ್ರಹಿಸುವುದರಿಂದ ಹಿಡಿದು ಮಹಾರಾಷ್ಟ್ರದ ಕೊಲ್ವಾಡಿಯಂತಹ ಹಳ್ಳಿಗಳ ಶಾಲೆಗಳವರೆಗೆ, ಸಮುದಾಯಗಳು ಓದುವ ಸ್ಥಳಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ವಹಿಸಿಕೊಂಡವು; ಇದು ದೇಶದ ಪ್ರತಿಯೊಂದು ಮಗುವಿಗೂ ಕತೆ ಪುಸ್ತಕಗಳು ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳುವ ಹಂಚಿಕೆಯ ಜವಾಬ್ದಾರಿಯ ಆಂದೋಲನವನ್ನು ಹುಟ್ಟುಹಾಕಿತು.

## ವೇದಿಕೆಗಳು, ಪಾಲುದಾರಿಕೆಗಳು ಮತ್ತು ಸಮುದಾಯದ ಮೂಲಕ ವ್ಯಾಪ್ತಿಯನ್ನು ವಿಸ್ತರಿಸುವುದು

**2014 - 2018**

ಮಕ್ಕಳಿಗೆ ಕತೆ ಪುಸ್ತಕಗಳು ಲಭ್ಯವಾಗುವ ಸಾಧ್ಯತೆಯನ್ನು ಸ್ಟೋರಿವೀವರ್ ಸಂಪೂರ್ಣವಾಗಿ ಹೊಸ ಪ್ರಮಾಣದಲ್ಲಿ ಮರು ವ್ಯಾಖ್ಯಾನಿಸಿದೆ. 800 ಮುಕ್ತ-ಪರವಾನಗಿ ಪಡೆದ ಕತೆಗಳೊಂದಿಗೆ ಪ್ರಾರಂಭಿಸಿ, ಇಂದು ಈ Digital Public Goodsನಲ್ಲಿ 380ಕ್ಕೂ ಹೆಚ್ಚು ಭಾಷೆಗಳಲ್ಲಿ 60,000ಕ್ಕೂ ಹೆಚ್ಚು ಕತೆಗಳಿವೆ. ಈ ಕತೆಗಳನ್ನು ನಿರಂತರವಾಗಿ ಅನುವಾದಿಸಲಾಗುತ್ತದೆ, ಸ್ಥಳೀಯ ಸಂದರ್ಭಗಳಿಗೆ ಹೊಂದಿಸಿಕೊಳ್ಳಲಾಗುತ್ತದೆ ಮತ್ತು ಯಾವುದೇ ಖರ್ಚಿಲ್ಲದೇ ಪ್ರಪಂಚದಾದ್ಯಂತ ಮತ್ತೆ ಮತ್ತೆ ಹಂಚಿಕೆ ಮಾಡಲಾಗುತ್ತದೆ.

PRATHAM BOOKS donate-a-book

PRATHAM BOOKS storyweaver

ಸಮುದಾಯದ ಸ್ವಯಂಸೇವಕರು ಸ್ಟೋರಿವೀವರ್ ಮೂಲಕ ಹಿಂದಿ ಚಿತ್ರ ಪುಸ್ತಕಗಳನ್ನು ಗೊಂಡಿ ಭಾಷೆಗೆ ಅನುವಾದಿಸುವ ಮೂಲಕ ಮನೀಷಾಳಂತಹ ಮಕ್ಕಳು ಜೀವನದಲ್ಲಿ ಮೊದಲ ಬಾರಿಗೆ ತಮ್ಮ ಮಾತೃಭಾಷೆಯಲ್ಲಿ ಪುಸ್ತಕವನ್ನು ಓದುವ ಅವಕಾಶವನ್ನು ನೀಡಿದರು.





ಡೊನೇಟ್-ಎ-ಬುಕ್ ವೇದಿಕೆಯಲ್ಲಿ ಮ್ಯಾಂಗೋ ಟ್ರೀ ಆಯೋಜಿಸಿದ ಕ್ರೌಡ್‌ಫಂಡಿಂಗ್ ಅಭಿಯಾನದ ಮೂಲಕ ಚಿತ್ರ ಪುಸ್ತಕಗಳನ್ನು ಸ್ವೀಕರಿಸುತ್ತಿರುವ ಮಕ್ಕಳು.

ಓದುವ ಭಾರತವನ್ನು ನಿರ್ಮಿಸುವ ನಿಟ್ಟಿನಲ್ಲಿ ಡೊನೇಟ್-ಎ-ಬುಕ್‌ನ 10 ವರ್ಷಗಳ ಕಾರ್ಯಗಳನ್ನು ನೋಡಲು ಸ್ಕ್ಯಾನ್ ಮಾಡಿ!

2020.

## ಕತೆಗಳನ್ನು ಕಲಿಕಾ ಸಾಧನಗಳಾಗಿ ಪರಿವರ್ತಿಸುವ ಮೂಲಕ ವ್ಯವಸ್ಥೆ ಮಟ್ಟದ ಬದಲಾವಣೆ ತರುವುದು

ದೇಶಾದ್ಯಂತ ಸಾಂಕ್ರಾಮಿಕ ರೋಗವು ಶಾಲೆಯ ತರಗತಿಗಳನ್ನು ಸುಮ್ಮನಾಗಿಸಿದಾಗ, ಪ್ರಥಮ್ ಬುಕ್ಸ್, SCERT ಮಹಾರಾಷ್ಟ್ರ ಮತ್ತು UNICEF ಜೊತೆಗಿನ ಪಾಲುದಾರಿಕೆಯಲ್ಲಿ, 100,000 ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ 'ಘೋಷ್ಟಿಚಾ ಶನಿವಾರ್ (ಕತೆಗಳ ಶನಿವಾರ)'ವನ್ನು ಪ್ರಾರಂಭಿಸಿತು, ಲಕ್ಷಾಂತರ ಮಕ್ಕಳು ರಚನಾತ್ಮಕ ಕಥಾ ಸಮಯದ ಮೂಲಕ ಕಲಿಕೆಯನ್ನು ಮುಂದುವರಿಸುವುದನ್ನು ಇದು ಖಚಿತಪಡಿಸಿತು.

ಮಹಾರಾಷ್ಟ್ರದ ಪಾಲ್ಘರ್‌ನಲ್ಲಿರುವ ಜಿಲ್ಲಾ ಪರಿಷತ್ ಶಾಲೆಯ 1ನೇ ತರಗತಿಯ ವಿದ್ಯಾರ್ಥಿನಿ ಬಾಲ್ಯದ ಮಧುಮೇಹದಿಂದ ಬಳಲುತ್ತಿದ್ದ ಶಾಂಭವಿ ಪಾಟೀಲ್ ಅಧ್ಯಯನದಲ್ಲಿ ಆಸಕ್ತಿಯನ್ನು ಕಳೆದುಕೊಂಡಿದ್ದಳು. 'ಗೋಷ್ಟಿಚಾ ಶನಿವಾರ' ಮೂಲಕ, ಅವಳು ಪ್ರತಿ ಶನಿವಾರ ತನ್ನ ಶಿಕ್ಷಕರ ಬೆಂಬಲದೊಂದಿಗೆ ವರ್ಣರಂಜಿತ ಮತ್ತು ಆಸಕ್ತಿದಾಯಕ ಕಥಾ ಪುಸ್ತಕಗಳನ್ನು ಓದಲು ಪ್ರಾರಂಭಿಸಿದಳು.

ದಿನಗಳು ಕಳೆದಂತೆ, ಶಾಂಭವಿ ಪ್ರಶ್ನೆಗಳನ್ನು ಕೇಳಲು, ಕತೆಗಳ ಬಗ್ಗೆ ಚರ್ಚಿಸಲು ಪ್ರಾರಂಭಿಸಿದಳು ಮತ್ತು ತರಗತಿಯಲ್ಲಿ ಸಕ್ರಿಯವಾಗಿ, ಉತ್ಸಾಹದಿಂದ ಭಾಗವಹಿಸುವ ಹಾಗಾದಳು.

## ಮೂಲಭೂತ ಶಿಕ್ಷಣವನ್ನು ದೊಡ್ಡ ಪ್ರಮಾಣದಲ್ಲಿ ಬಲಪಡಿಸುವುದು

ಸಾಂಕ್ರಾಮಿಕ ರೋಗದ ನಂತರ, ನಾವು NIPUN ಭಾರತ್ ಮಿಷನ್ ಮತ್ತು ರಾಷ್ಟ್ರೀಯ ಕಲಿಕಾ ಫಲಿತಾಂಶಗಳಿಗೆ ಅನುಗುಣವಾಗಿ ಒಂದು ಮೂಲಭೂತ ಸಾಕ್ಷರತಾ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ, ಇದು 1–3ನೇ ತರಗತಿಯ ಮಕ್ಕಳು ಓದುವುದನ್ನು ಕಲಿಯುವುದರಿಂದ ಕಲಿಯಲು ಓದುವುದನ್ನು ಮುಂದುವರಿಸಲು ಸಹಾಯ ಮಾಡುತ್ತದೆ. ಹಿಂದಿ ಮತ್ತು ಮರಾಠಿಯಲ್ಲಿ ಅಭಿವೃದ್ಧಿಪಡಿಸಲಾದ ಈ ಕಾರ್ಯಕ್ರಮವು ತರಗತಿಯ ಬೋಧನೆ ಮತ್ತು ವ್ಯವಸ್ಥೆಯ ಅಳವಡಿಕೆ ಎರಡನ್ನೂ ಬೆಂಬಲಿಸುತ್ತದೆ. ರಾಜ್ಯ ಶಿಕ್ಷಣ ಇಲಾಖೆಗಳ ಸಹಭಾಗಿತ್ವದಲ್ಲಿ, ಈ ಕಾರ್ಯಕ್ರಮವು ಛತ್ತೀಸ್‌ಗಢದಲ್ಲಿ 30,000 ಪ್ರಾಥಮಿಕ ಶಾಲೆಗಳು ಮತ್ತು 2.6 ಮಿಲಿಯನ್ ಮಕ್ಕಳನ್ನು ಮತ್ತು ಮಹಾರಾಷ್ಟ್ರದಲ್ಲಿ 42,000 ಶಾಲೆಗಳು ಮತ್ತು 4 ಮಿಲಿಯನ್ ಮಕ್ಕಳನ್ನು ತಲುಪಿದೆ.

ನಮ್ಮ ಮೂಲಭೂತ ಕಲಿಕಾ ಕಾರ್ಯಕ್ರಮಗಳಲ್ಲಿ, ಕ್ಷೇತ್ರ ಅಧ್ಯಯನಗಳು ಧ್ವನಿಜ್ಞಾನದ ಅರಿವು, ಪದ ಓದುವಿಕೆ ಮತ್ತು ಗ್ರಹಿಕೆಯಲ್ಲಿ 15–40%ರಷ್ಟು ಸುಧಾರಣೆಗಳನ್ನು ದಾಖಲಿಸಿವೆ; ಕತೆಗಳನ್ನು ಸ್ವತಂತ್ರವಾಗಿ ಓದುವ ಸಾಮರ್ಥ್ಯವು 44%ರಿಂದ 82%ಕ್ಕೆ ಏರಿದೆ.

ಇಲ್ಲಿಯವರೆಗೆ ನಮ್ಮ ಹೈಬ್ರಿಡ್ ಕತೆ ಆಧಾರಿತ ಕಲಿಕಾ ಕಾರ್ಯಕ್ರಮಗಳನ್ನು 72,000 ಶಾಲೆಗಳಲ್ಲಿ ನಿಯೋಜಿಸಲಾಗಿದ್ದು, ಸುಮಾರು 7 ಮಿಲಿಯನ್ ಮಕ್ಕಳನ್ನು ತಲುಪಿದೆ.



## STEM ಅನ್ನು ಪ್ರವೇಶಿಸಲು ಕತೆಗಳನ್ನು ಮಾಧ್ಯಮವಾಗಿ ಬಳಸುವುದು

ನಮ್ಮ ಕಥಾ ಆಧಾರಿತ ವಿಧಾನವು STEM ಕಲಿಕೆಗೂ ವಿಸ್ತರಿಸಿದೆ. ವೈಜ್ಞಾನಿಕ ಕುತೂಹಲವನ್ನು ಹುಟ್ಟುಹಾಕುವ 200ಕ್ಕೂ ಹೆಚ್ಚು ಪಠ್ಯಕ್ರಮ-ಜೋಡಣೆಗೊಂಡ ಚಿತ್ರ ಪುಸ್ತಕಗಳನ್ನು ಆಧರಿಸಿದ ನಮ್ಮ 'STEM ವಿತ್ ಸ್ಟೋರೀಸ್' ಕಾರ್ಯಕ್ರಮ ಶಿಕ್ಷಕರ ತರಬೇತಿಗಳೊಂದಿಗೆ ಸೇರಿ ಆರಂಭಿಕ ತರಗತಿಗಳಲ್ಲಿ STEM ಬಗ್ಗೆ ಆಸಕ್ತಿಯನ್ನು ಹುಟ್ಟುಹಾಕುತ್ತದೆ.

ರಾಜಸ್ಥಾನದ ಕೋಟಾದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ನಡೆದ ಪೈಲಟ್ ಅಧ್ಯಯನದಲ್ಲಿ, ವಿದ್ಯಾರ್ಥಿಗಳು STEM ತಿಳಿವಳಿಕೆಯಲ್ಲಿ 33%ರಷ್ಟು ಹೆಚ್ಚಳ (42%ರಿಂದ 75%ಕ್ಕೆ), ಅನ್ವಯಿಕ STEM ಕೌಶಲ್ಯಗಳಲ್ಲಿ 28ರಷ್ಟು ಹೆಚ್ಚಳ ಮತ್ತು ಕಾರ್ಯಕ್ರಮದ ಮೊದಲು ಮತ್ತು ನಂತರ ಕಲಿಕೆಯ ಮನಸ್ಥಿತಿಯಲ್ಲಿ 32ರಷ್ಟು ಸುಧಾರಣೆಯನ್ನು ದಾಖಲಿಸಿದ್ದಾರೆ.

## ಚಿತ್ರ ಪುಸ್ತಕಗಳ ಮೂಲಕ ಲಿಂಗ ಸಂಬಂಧಿತ ರೂಢಿಗತ ಕಲ್ಪನೆಗಳನ್ನು ಮುರಿಯುವುದು

ಮಕ್ಕಳಿಗೆ, ತಮ್ಮ ಲಿಂಗ ಏನೇ ಇರಲಿ, ಅವರು ನಿಜವಾಗಿಯೂ ಏನಾಗಿರುತ್ತಾರೋ ಹಾಗೆಯೇ ಇರಬಲ್ಲರು ಎಂಬ ನಂಬಿಕೆಯನ್ನು ಬಲಪಡಿಸುವ ಕತೆಗಳು ಬೇಕಾಗುತ್ತವೆ. ಭಾರತದಲ್ಲಿ ಪ್ರಚಲಿತದಲ್ಲಿರುವ ಸೀಮಿತ ನಿರೂಪಣೆಗಳು ಮತ್ತು ಸಾಂಪ್ರದಾಯಿಕ ಪಾತ್ರಗಳಿಗೆ ಪ್ರತಿಕ್ರಿಯಿಸುತ್ತಾ, ಸಾಂಪ್ರದಾಯಿಕ ಪಾತ್ರಗಳಲ್ಲದ ಪ್ರಮುಖ ಪಾತ್ರಗಳನ್ನು ಒಳಗೊಂಡ ಕತೆ ಆಧಾರಿತ ಕಲಿಕಾ ಕಾರ್ಯಕ್ರಮವನ್ನು ನಾವು ಅಭಿವೃದ್ಧಿಪಡಿಸಿದ್ದೇವೆ.

ಯುನಿಸೆಫ್‌ನ 'ಲಿಂಗ್ ಸಂಭವ್' ಉಪಕ್ರಮದ ಭಾಗವಾಗಿ, ಪ್ರಥಮ್ ಬುಕ್ಸ್ Open Books, Open Doors, Open Minds: Gender Transformation Through Storybooks ಕಾರ್ಯಕ್ರಮವನ್ನು ಪ್ರಾರಂಭಿಸಿತು. ಕಾರ್ಯಕ್ರಮವು ಒಂದರಿಂದ ಐದನೇ ತರಗತಿಯ ಮಕ್ಕಳಲ್ಲಿ ಲಿಂಗ ಸಮಾನತೆಯನ್ನು ಪ್ರತಿಪಾದಿಸಲು ಪುಸ್ತಕಗಳ ಶಕ್ತಿಯನ್ನು ಬಳಸುತ್ತದೆ.

ಮಹಾರಾಷ್ಟ್ರದ ಧರಶಿವದಲ್ಲಿ ಪೈಲಟ್ ಯೋಜನೆಯನ್ನು ಜಾರಿಗೆ ತಂದಾಗ, ಮೂಲ ಮೌಲ್ಯಮಾಪನವು 51% ಹುಡುಗಿಯರು ಎರಡೂ ಲಿಂಗಗಳು ಪೊಲೀಸ್ ಅಧಿಕಾರಿಗಳಾಗಬಹುದು ಎಂದು ನಂಬಿದ್ದರು ಎಂದು ಸೂಚಿಸಿತು; ಅಂತಿಮ ಮೌಲ್ಯಮಾಪನದಲ್ಲಿ, ಇದು 93% ಕ್ಕೆ ಏರಿತು.

UNICEF ಮಹಾರಾಷ್ಟ್ರದೊಂದಿಗಿನ ಪೈಲಟ್ ಕಾರ್ಯಕ್ರಮದ ನಮ್ಮ 'ಇಂಪ್ಯಾಕ್ಟ್ ಫಿಲ್ಮ್' ವೀಕ್ಷಿಸಲು ಸ್ಕ್ಯಾನ್ ಮಾಡಿ.

# ಈ ಕ್ಷಣದ ಅಂಕಿ ಅಂಶ

7000+ ಪ್ರಕಟವಾದ ಚಿತ್ರ ಪುಸ್ತಕಗಳು

32+ ಮುದ್ರಿತ ಭಾಷೆಗಳು

380+ ಬೆಂಬಲಿತ ಭಾಷೆಗಳು

~200K ತಲುಪಿದ ಸರ್ಕಾರಿ ಶಾಲೆಗಳು


35+M ವಿತರಿಸಲಾದ ಚಿತ್ರ ಪುಸ್ತಕಗಳು

~5000 ಪ್ರಾಯೋಗಿಕ ಪಾಲುದಾರರು

10+M ಡಿಜಿಟಲ್ ಬಳಕೆದಾರರು

250M ಡಿಜಿಟಲ್ ಓದುಗರು

12+ ಸರ್ಕಾರಿ ಭಾಗಿತ್ವದ ಮಧ್ಯಸ್ಥಿಕೆಗಳು



ನಮ್ಮ ಚಿತ್ರ ಪುಸ್ತಕಗಳು 26 ಭಾರತೀಯ ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾಣ ಸಿಗುತ್ತವೆ.



# ವರ್ಷದ ವಿಮರ್ಶೆ


2024ರಲ್ಲಿ, ನಾವು ಒಂದು ಸಂಸ್ಥೆಯಾಗಿ ನಮ್ಮ 20ನೇ ವಾರ್ಷಿಕೋತ್ಸವವನ್ನು ಆಚರಿಸಿದೆವು, ಭಾರತದಲ್ಲಿ ಸಂತೋಷದಾಯಕ ಮತ್ತು ಎಲ್ಲರನ್ನೂ ಒಳಗೊಂಡ ಓದುವ ಸಂಸ್ಕೃತಿಯನ್ನು ಸೃಷ್ಟಿಸುವತ್ತ ನಾವು ನಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದ್ದೇವೆ.





# ಚಿತ್ರ ಪುಸ್ತಕಗಳ ಸಂಭ್ರಮಾಚರಣೆ


ನಮ್ಮ ಸಂಪಾದಕೀಯ ತಂಡವು ದೃಶ್ಯ ಸಾಕ್ಷರತೆಯನ್ನು ಪೋಷಿಸುವ ವಿಷಯದಲ್ಲಿ ಮುಂಚೂಣಿಯಲ್ಲಿದೆ. ಅರುಂಧತಿ ವೆಂಕಟೇಶ್ ಬರೆದ ಮತ್ತು ಕನಾಟೊ ಜಿಮೊ ಚಿತ್ರಿಸಿದ ಇಲಿ-ಬೆಕ್ಕು ಎಂಬ ನೋಡಿದರೇ ಖುಷಿಯಾಗುವ ಚಿತ್ರ ಪುಸ್ತಕ, ಯೋಗೇಶ್ ಮೈತ್ರೇಯ ಬರೆದ ಮತ್ತು ಭಾರ್ಗವಿ ರುದ್ರರಾಜು ಚಿತ್ರಿಸಿದ ಈ ಭೂಮಿ ನನ್ನ ಶಾಲೆ ಎಂಬ ದಾದಾಜಿ ಖೋಬ್ರಗಡೆ ಅವರ ಜೀವನ ಚರಿತ್ರೆ, ಕಬಿನಿ ಅಮೀನ್ ಅವರ ಅಕ್ಷರಗಳಿಲ್ಲದ ಪುಸ್ತಕ ಕಬಡ್ಡಿ, ಕಬಡ್ಡಿ ಮತ್ತು ಹಿತೇಶ್ ಸೋನಾರ್ ಅವರ ಧೀ ಕಳ್ಳಾ...! ಸಿಕ್ಕಿಬಿಟ್ಟೆ ಎಂಬ ಚೆಂದದ ಪುಸ್ತಕ ಸೇರಿದಂತೆ ನಾವು ಮುಂತಾದ ಶೀರ್ಷಿಕೆಗಳ ಮೂಲಕ, ಎಲ್ಲಾ ಪ್ರಕಾರಗಳ ಮಕ್ಕಳ ಚಿತ್ರ ಪುಸ್ತಕಗಳನ್ನು ರಚಿಸಲು ಕೆಲಸ ಮಾಡಿದ್ದೇವೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್, ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಅಂಡ್ ಟೆಕ್ನಾಲಜಿ ಮತ್ತು ಕ್ರೈಸ್ಟ್ (ಡೀಮ್ಡ್ ಯೂನಿವರ್ಸಿಟಿ) ನಂತಹ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಕಾರ್ಯಾಗಾರಗಳು ಮತ್ತು ಹ್ಯಾಕಥಾನ್‌ಗಳನ್ನು ನಡೆಸುವ ಮೂಲಕ ಮುಂದಿನ ಪೀಳಿಗೆಯ ಸೃಷ್ಟಿಕರ್ತರಲ್ಲಿ ದೃಶ್ಯ ಸಾಕ್ಷರತೆಯನ್ನು ಪೋಷಿಸಲು ನಾವು ಕೆಲಸ ಮಾಡಿದ್ದೇವೆ.










## ಚಿತ್ರ ಪುಸ್ತಕಗಳಲ್ಲಿ ಸ್ಥಳೀಯ ಕಲಾ ಪ್ರಕಾರಗಳನ್ನು ಅನ್ವೇಷಿಸುವುದು

ಪ್ರಥಮ್ ಬುಕ್ಸ್ ಭಾರತದಾದ್ಯಂತದ ಆರು ಸ್ಥಳೀಯ ಮಹಿಳಾ ಕಲಾವಿದರನ್ನು ನಾವು ಬಯಸುವುದು ಏನೆಂದರೆ... ಎಂಬ ಚಿತ್ರ ಪುಸ್ತಕವನ್ನು ರಚಿಸಲು ಕಾರ್ಯಾಗಾರಕ್ಕೆ ಆಹ್ವಾನಿಸಿತು. ಪಟಚಿತ್ರದಿಂದ ಫಡ್ ವರೆಗಿನ ಆರು ಸಾಂಪ್ರದಾಯಿಕ ಕಲಾ ಶೈಲಿಗಳಲ್ಲಿ ಅವರ ಕನಸುಗಳು ಮತ್ತು ಆಕಾಂಕ್ಷೆಗಳನ್ನು ಪ್ರದರ್ಶಿಸಲಾಯಿತು.





ವಿಶ್ವ ಕಲಾ ದಿನದಂದು, ಈ ಪುಸ್ತಕವು ದೇಶಾದ್ಯಂತ ಮಕ್ಕಳೊಂದಿಗೆ ನಡೆಯುವ ಸೆಷನ್ನುಗಳ ಕೇಂದ್ರಬಿಂದುವಾಯಿತು, ಕಲೆಯ ಮೂಲಕ ತಮ್ಮ ಕನಸುಗಳನ್ನು ವ್ಯಕ್ತಪಡಿಸಲು ಅವರನ್ನು ಪ್ರೋತ್ಸಾಹಿಸಿತು. ಮಕ್ಕಳು ಸೆಷನ್ನುಗಳಿಗೆ ಸ್ನೇಹಪರವಾಗಿ ಮತ್ತು ಉತ್ಸಾಹದಿಂದ ಪ್ರತಿಕ್ರಿಯಿಸಿದರು. 9 ವರ್ಷದ ಯಶಿಕಾ, ಬಣ್ಣದ ಜಾಗದ ಕಲ್ಪನೆಯನ್ನು ಹೊಂದಿದ್ದರು. 10 ವರ್ಷದ ಸೌಮ್ಯಾ, ತನ್ನ ಹುಟ್ಟುಹಬ್ಬವು ವಿಶ್ವ ಲೇಖಕರ ದಿನವಾಗುವಂತೆ ಪ್ರಸಿದ್ಧ ಬರಹಗಾರ್ತಿಯಾಗಬೇಕೆಂದು ಬಯಸಿದ್ದಳು. 11 ವರ್ಷದ ಆರೋಹಿ, ಸೂರ್ಯನು ತನ್ನ ಆತ್ಮೀಯ ಸ್ನೇಹಿತನಾಗಬೇಕೆಂದು ಬಯಸಿದ್ದಳು ಹಾಗೂ 11 ವರ್ಷದ ನವಿಕಾ, ಉನ್ನತ ಶಿಕ್ಷಣವನ್ನು ಮುಂದುವರಿಸುವ ತನ್ನ ದೃಢಸಂಕಲ್ಪವನ್ನು ವಿವರಿಸಿದಳು.





## ಚಿತ್ರ ಪುಸ್ತಕಗಳ ಮೂಲಕ ಕಲಿಕೆ

ಅಪರ್ಣಾ ಕಪೂರ್ ಮತ್ತು ಪ್ರಿಯಾ ಕುರಿಯನ್ ಅವರ ಚಂದ್ರನ ತುಂಬಾ ಇರುವೆ, ಲಾವಣ್ಯಾ ಕಾರ್ತಿಕ್ ಬರೆದ ಪಂಕಜ್ ಸೈಕಿಯಾ ಚಿತ್ರಿಸಿದ ಗಿಲಿ ಗಿಲಿಯಕ್ಕ ಇಲ್ಲಿ ನೋಡಕ್ಕಾ..., ಆಸ್ಮಾ ನೂರ್ ಬರೆದ ನೀಲೂಳ ಜುಬೈದಾ ಮತ್ತು ಪಾರೋ ಆನಂದ್ ಬರೆದ ಡೇವಿಡ್ ಯಾಂಬೆಮ್ ಚಿತ್ರಿಸಿದ ಅವರಲ್ಲ ಇವರಲ್ಲ ಮತ್ತೆ ಯಾರು? ಮುಂತಾದ ರೋಮಾಂಚಕ, ಬಾಯಿ ತೆರೆದು ಓದಬಹುದಾದ ಪುಸ್ತಕಗಳನ್ನು ರಚಿಸುವುದನ್ನು ನಾವು ಮುಂದುವರಿಸಿದ್ದೇವೆ. ಸರಳವಾದ ಆದರೆ, ಹೃದಯಸ್ಪರ್ಶಿ ಕತೆಗಳ ಮೂಲಕ ಮಕ್ಕಳ ಭಾವನೆಗಳು ಅರ್ಥವಾಗಲು ಸಹಾಯ ಮಾಡುವ ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆ (SEL) ಚಿತ್ರ ಪುಸ್ತಕಗಳ ಕ್ಯಾಟಲಾಗ್ ಅನ್ನೂ ಸಹ ನಾವು ವಿಸ್ತರಿಸಿದ್ದೇವೆ. ಇದರಲ್ಲಿ ಮೊದಲ ಬಾರಿಗೆ ಲೇಖಕಿಯಾಗಿರುವ ರಿಶಿತಾ ಲೊಯ್ಟೊಂಗ್‌ಬಮ್ ಅವರ ಅಕ್ಷರಗಳಿಲ್ಲ ಚಿತ್ರ ಪುಸ್ತಕ ನಾಚಿಕೆಯ ಥೊಯ್‌ಥೊಯ್, ಜೈರಾಜ್ ಸಿಂಘ್ ಬರೆದ ಐಂದ್ರಿ ಸಿ ಚಿತ್ರಿಸಿರುವ ಪುಸ್ತಕಗಳಿಂದ ತುಂಬಿದ ಮನೆ, ಕೋಮಿಲಾ ರಾವುತೆ ಬರೆದ, ಶುಭಶ್ರೀ ಮಾಥೂರ್ ಚಿತ್ರಿಸಿದ ತಕರಾರು ಪುಟ್ಟಿ ಮೋನಾ, ಸೋಮಕ್ ಘೋಷಲ್ ಬರೆದ, ಪ್ರೊಯಿತಿ ರಾಯ್ ಚಿತ್ರಿಸಿರುವ ಪಿಕು ಮತ್ತು ಅವನ ಯಕ್ಷಿಣಿ ಅತ್ತೆ, ಶ್ರೀಜಾ ರಾವ್ ಬರೆದ ಕೃತಿಕಾ ಸೂಸರ್ಲ ಚಿತ್ರಿಸಿದ ಕತೆಗಳ ಅರಮನೆ ಮುಂತಾದ ಶೀರ್ಷಿಕೆಗಳು ಸೇರಿವೆ. ಇವು ನಮ್ಮ ಸುತ್ತಲಿನ ಪ್ರಪಂಚದ ಜೊತೆಗಿನ ಸಹಾನುಭೂತಿಯ ಪ್ರತಿಬಿಂಬಗಳಾಗಿವೆ. ಜಗತ್ತಿನಲ್ಲಿ ಹೆಚ್ಚುತ್ತಿರುವ ಹಿಂಸಾಚಾರಕ್ಕೆ ಪ್ರತಿಕ್ರಿಯೆಯಾಗಿ, ನಾವು ಫೌಸ್ಟೊ ಆರ್ಯ ದೆ ಸಾಂತಿಸ್ ಬರೆದ, ಓಗಿನ್ ನಯಮ್ ಚಿತ್ರಿಸಿದ ಅದೇ ಆಕಾಶದ ಕೆಳಗೆ ಅದೇ ಕನಸು ಎಂಬ ಶಾಂತಿಯ ಪುಸ್ತಕವನ್ನು ಸಹ ಪ್ರಕಟಿಸಿದ್ದೇವೆ.



ಪ್ರಥಮ್ ಬುಕ್ಸ್ ಮಕ್ಕಳಿಗೆ ಜಾಗತಿಕ ಹವಾಮಾನ ಬಿಕ್ಕಟ್ಟು ಮತ್ತು ನಮ್ಮ ಪರಿಸರವನ್ನು ರಕ್ಷಿಸುವ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಚಿತ್ರ ಪುಸ್ತಕಗಳನ್ನು ಪ್ರಕಟಿಸುವ ದೀರ್ಘ ಇತಿಹಾಸವನ್ನು ಹೊಂದಿದೆ. ಈ ವರ್ಷ ನಾವು ಭಾರತದಲ್ಲಿನ ಸಂರಕ್ಷಣಾ ಪ್ರಯತ್ನಗಳ ಮೇಲೆ ಕೇಂದ್ರೀಕರಿಸಿದ ಎರಡು ಶೀರ್ಷಿಕೆಗಳನ್ನು ಪ್ರಕಟಿಸಿದ್ದೇವೆ, ಅವುಗಳಲ್ಲಿ ರಾಧಾ ರಂಗರಾಜನ್ ಬರೆದ ಮತ್ತು ರಾಜೀವ್ ಐಪ್ ಚಿತ್ರಿಸಿದ ಚಿಪ್ಪುಹಂದಿ ರಕ್ಷಕರು ಮತ್ತು ಮೀನು ಥಾಮಸ್ ಬರೆದ ಮತ್ತು ರೋಹಿತ್ ಕೇಳ್ಕರ್ ಚಿತ್ರಿಸಿದ ಬಂಬ್: ಮಾಯಾ ಸಿಲಿಂಡರ್ ಸೇರಿವೆ. ಭಾರತ, ಸ್ವಿಟ್ಜರ್ಲೆಂಡ್ ಮತ್ತು ಉಗಾಂಡಾದ ವಿಜ್ಞಾನಿಗಳು ಮತ್ತು ಕಲಾವಿದರು ಗ್ರಹದ ಉತ್ತಮ ಆರೋಗ್ಯಕ್ಕಾಗಿ ತಮ್ಮ ಭರವಸೆಗಳನ್ನು ಹಂಚಿಕೊಳ್ಳಲು ಬೆಂಗಳೂರಿನಲ್ಲಿ ಒಗ್ಗೂಡಿದ್ದರು. Trialogue Days – Planetary Health from Different Perspectives: Mind the Gap - ಇದರ ಭಾಗವಾಗಿದ್ದ ಪ್ರಥಮ್ ಬುಕ್ಸ್ ಅವರೆಲ್ಲರ ಪ್ರಯತ್ನಗಳನ್ನು One Earth: Planetary Health for All ಎಂಬ ಚಿತ್ರ ಪುಸ್ತಕದ ಮೂಲಕ ಸೆರೆಹಿಡಿದಿದೆ.



## ಚಿತ್ರ ಪುಸ್ತಕಗಳ ಮೂಲಕ STEM ಕಲಿಕೆ

ಪ್ರಥಮ್ ಬುಕ್ಸ್‌ನ ವ್ಯಾಪಕವಾದ STEM ಚಿತ್ರ ಪುಸ್ತಕ ಕ್ಯಾಟಲಾಗ್, ಕತೆ ಪುಸ್ತಕಗಳ ಶಕ್ತಿಯ ಮೂಲಕ STEM ವಿಷಯಗಳಲ್ಲಿ ಪರಿಶೋಧನೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಪ್ರೇರೇಪಿಸುವ ಗುರಿಯನ್ನು ಹೊಂದಿದೆ. ಛತ್ತೀಸ್‌ಗಢದಲ್ಲಿ, ರಾಜ್ಯದ middle-grade ವಿದ್ಯಾರ್ಥಿಗಳಿಗಾಗಿ ಕೈಗೊಂಡ ಪರಿಹಾರ ಕಾರ್ಯಕ್ರಮದಲ್ಲಿ ನಮ್ಮ ಕತೆ ಆಧಾರಿತ ಕಲಿಕಾ ತಂತ್ರಗಳನ್ನು ಸಂಯೋಜಿಸಲು ನಾವು ಸಮಗ್ರ ಶಿಕ್ಷಾ ಅಭಿಯಾನ (SSA) ಜೊತೆಗೆ ಕೆಲಸ ಮಾಡಿದ್ದೇವೆ. ಮುಂಬರುವ ರಾಷ್ಟ್ರೀಯ ಸಾಧನೆ ಸಮೀಕ್ಷೆ (NAS) ಕೂಡ -ಇಲಾಖೆಯು ಆರಂಭಿಕ ದರ್ಜೆಯ ವಿಜ್ಞಾನ ಮತ್ತು ಗಣಿತದಲ್ಲಿ ಪರಿಕಲ್ಪನಾತ್ಮಕ ಸ್ಪಷ್ಟತೆಯನ್ನು ಬೆಂಬಲಿಸುವ ಪ್ರಮುಖ ಸಾಧನವಾಗಿ ಇದನ್ನು ಗುರುತಿಸಿದೆ. ಈ ಸಹಯೋಗದ ಭಾಗವಾಗಿ, ವೈಜ್ಞಾನಿಕ ಕುತೂಹಲವನ್ನು ಬೆಳೆಸಲು ಸಹಾಯ ಮಾಡಲು ನಮ್ಮ STEM ಚಿತ್ರ ಪುಸ್ತಕಗಳನ್ನು ಬಳಸುವ ಬಗ್ಗೆ ನಾವು ರಾಜ್ಯಾದ್ಯಂತ 5,000 ಶಿಕ್ಷಕರಿಗೆ ತರಬೇತಿ ನೀಡಿದ್ದೇವೆ.

"ಪ್ರಥಮ್ ಬುಕ್ಸ್‌ನ STEM ಕತೆಗಳು ಮಕ್ಕಳು ಪರಿಕಲ್ಪನೆಗಳನ್ನು ತ್ವರಿತವಾಗಿ ಅರ್ಥಮಾಡಿಕೊಳ್ಳುವುದನ್ನು ಸುಲಭಗೊಳಿಸಿವೆ; ಉದಾಹರಣೆಗೆ, ಸಂವಿದಾ ವೆಂಕಟೇಶ್ ಬರೆದ ಮತ್ತು ಸಂಧ್ಯಾ ಪ್ರಭಾತ್ ಚಿತ್ರಿಸಿದ I Spy! ಕತೆಯ ಮೂಲಕ ನನ್ನ ವಿದ್ಯಾರ್ಥಿಗಳಿಗೆ ವ್ಯವಕಲನ ಪ್ರಕ್ರಿಯೆ ಎಷ್ಟು ಸ್ಪಷ್ಟವಾಗಿ ಅರ್ಥವಾಯಿತೆಂದರೆ, ಇಷ್ಟನ್ನು ಅರ್ಥಮಾಡಿಸಲು ನನಗೆ ಆರು ತಿಂಗಳು ಬೇಕಾಗುತ್ತಿತ್ತು."

- ಶ್ರೀಮತಿ ಸೀಮಾ ಆಚಾರ್ಯ, ಶಿಕ್ಷಕಿ, ಸರ್ಕಾರಿ ಶಾಲೆ, ಕೋಟಾ

# ಭಾಷೆಗಳ ಉತ್ಸವ

ಮಕ್ಕಳು ಪ್ರತಿದಿನ ಮಾತನಾಡುವ, ಯೋಚಿಸುವ ಮತ್ತು ಕನಸು ಕಾಣುವ ಭಾಷೆಗಳಲ್ಲಿ ಉತ್ತಮವಾಗಿ ಓದಲು ಕಲಿಯುತ್ತಾರೆ ಎನ್ನುವುದು ನಮ್ಮ ನಂಬಿಕೆ. ಕಳೆದ ಎರಡು ದಶಕಗಳಲ್ಲಿ, ನಾವು ಮುಖ್ಯವಾಹಿನಿಯ ಮತ್ತು ಸ್ಥಳೀಯ ಭಾಷೆಗಳನ್ನು ಒಳಗೊಂಡಂತೆ 32ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ ಚಿತ್ರ ಪುಸ್ತಕಗಳನ್ನು ಪ್ರಕಟಿಸಿದ್ದೇವೆ ಮತ್ತು ನಮ್ಮ ಡಿಜಿಟಲ್ ಪ್ಲಾಟ್‌ಫಾರ್ಮ್, ಸ್ಟೋರಿವೀವರ್‌ನಲ್ಲಿ 370ಕ್ಕೂ ಹೆಚ್ಚು ಭಾಷೆಗಳಲ್ಲಿ ಚಿತ್ರ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಮುಂದುವರಿಸಿದ್ದೇವೆ.

ಕಳೆದ ವರ್ಷ ನಾವು 24 ಹೊಸ ಪುಸ್ತಕಗಳನ್ನು ಪ್ರಕಟಿಸಿದ್ದೇವೆ, ಅವುಗಳಲ್ಲಿ ಎಂಟು ಪುಸ್ತಕಗಳು language-first books ಪುಸ್ತಕಗಳಾಗಿದ್ದವು. ದೀಪಾ ಭಾಸ್ತಿ, ಕೊಳ್ಳೇಗಾಲ ಶರ್ಮಾ, ಮಾಧುರಿ ಪುರಂದರೆ ಮತ್ತು ವಸೀಮ್‌ಬಾರಿ ಮಣೇರ್ ಅವರಂತಹ ಸೃಷ್ಟಿಕರ್ತರು ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ ಬರೆದಿದ್ದಾರೆ. ಈ ಕತೆಗಳನ್ನು ಅನುಷ್ಕಾ ರವಿಶಂಕರ್, ಜಯಂತ್ ಕಾಯ್ಕಿಣಿ ಮತ್ತು ಶ್ರೀನಾಥ್ ಪೆರೂರ್ ಅವರಂತಹ ಪ್ರಶಸ್ತಿ ವಿಜೇತ ಬರಹಗಾರರು ಇಂಗ್ಲಿಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಿದ್ದಾರೆ.

ಮಾತೃಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಮಕ್ಕಳ ಸಾಹಿತ್ಯ ಲಭ್ಯವಾಗುವಂತೆ ಮಾಡುವ ನಮ್ಮ ಬದ್ಧತೆಗೆ ಅನುಗುಣವಾಗಿ, ಈ ವರ್ಷ ನಾವು 130ಕ್ಕೂ ಹೆಚ್ಚು ಅನುವಾದಗಳನ್ನು ಮಾಡಿದ್ದೇವೆ. ಇದರಲ್ಲಿ ಈಶಾನ್ಯ ಭಾರತದ ಮೇಲೆ ವಿಶೇಷ ಗಮನಹರಿಸಿದ್ದು, ಅಸ್ಸಾಮಿ ಮತ್ತು ಇತರ ಪ್ರಾದೇಶಿಕ ಭಾಷೆಗಳ 50ಕ್ಕೂ ಹೆಚ್ಚು ಕತೆಗಳನ್ನು ಸೇರಿಸಿದ್ದೇವೆ. ಭಾರತೀಯ ಭಾಷೆಗಳ ನಡುವೆ ನೇರವಾಗಿ ಅನುವಾದಿಸುವ ಮೂಲಕ ನುರಿತ ಅನುವಾದಕರ ವಿಶಾಲ ಜಾಲವನ್ನು ನಿರ್ಮಿಸಿ, ವಿಸ್ತರಿಸಿದ್ದೇವೆ. ವಿಶ್ವವಿದ್ಯಾಲಯದ ಭಾಷಾ ವಿಭಾಗಗಳು ಮತ್ತು ಶಿಕ್ಷಣ-ತರಬೇತಿ ಕಾರ್ಯಕ್ರಮಗಳೊಂದಿಗಿನ ಸಹಯೋಗವು ಹೆಚ್ಚಿನ ಶಿಕ್ಷಕರು ಮತ್ತು ಗ್ರಂಥಪಾಲಕರು ಚಿತ್ರ ಪುಸ್ತಕಗಳನ್ನು ಭಾಷಾಂತರಿಸಲು ಪ್ರೋತ್ಸಾಹಿಸಿತು. ಎಕ್ಸ್‌ಸ್ಟೆಪ್‌ನ ಬಚ್‌ಪನ್ ಮನಾವೊ ಸಹಭಾಗಿತ್ವದೊಂದಿಗೆ ನಾವು ಅಂತಾರಾಷ್ಟ್ರೀಯ ಮಾತೃಭಾಷಾ ದಿನದಂದು, ವಿವಿಧ ಹಂತಗಳಲ್ಲಿ ಮಕ್ಕಳ ಚಿತ್ರ ಪುಸ್ತಕಗಳ ಅನುವಾದಕ್ಕಾಗಿ ನಡೆಸಿದ ಸ್ಟೋರಿವೀವರ್ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ 250ಕ್ಕೂ ಹೆಚ್ಚು ಅನುವಾದಕರಿಗೆ ತರಬೇತಿ ನೀಡಿದ್ದೇವೆ.






# ಮಾತೃಭಾಷೆಗಳಲ್ಲಿ ವಿಷಯಾಧಾರಿತ ಸಾಹಿತ್ಯದ ಲಭ್ಯತೆಯನ್ನು ಹೆಚ್ಚಿಸುವುದು

ಈ ವರ್ಷ, ಪ್ರಥಮ್ ಬುಕ್ಸ್, ಭಾರತದಲ್ಲಿನ ಫ್ರೆಂಚ್ ಸಂಸ್ಥೆಯ ಸಹಭಾಗಿತ್ವದಲ್ಲಿ, ಯುವ ಓದುಗರಿಗಾಗಿ ಬಡತನ ಮತ್ತು ಅಸಮಾನತೆಯ ಕುರಿತು ಹೊಸ ಪುಸ್ತಕಗಳ ಸರಣಿಯನ್ನು ಬಿಡುಗಡೆ ಮಾಡಿತು. ನೊಬೆಲ್ ಪ್ರಶಸ್ತಿ ವಿಜೇತ ಎಸ್ಥರ್ ದುಫ್ಲೋ ಬರೆದ ಮತ್ತು ಶಾಯೆನ್ ಒಲೀವ್ಹಿಯೆ ಚಿತ್ರಿಸಿದ ಈ ಸರಣಿಯು ಐದು ಭಾರತೀಯ ಭಾಷೆಗಳಲ್ಲಿ ಲಭ್ಯವಿದೆ: ಕನ್ನಡ, ಮರಾಠಿ, ಹಿಂದಿ, ತಮಿಳು ಮತ್ತು ಮಲಯಾಳಂ.





ಇಲ್ಲಸ್ಟ್ರೇಟರ್ ಶಾಯೆನ್ ಒಲೀವ್ಹಿಯೆ ಮತ್ತು ಲೇಖಕಿ ಎಸ್ಥರ್ ದುಫ್ಲೋ ತಮ್ಮ ಮಕ್ಕಳ ಪುಸ್ತಕ ಸರಣಿಯ ಮರಾಠಿ ಮತ್ತು ಮಲಯಾಳಂ ಅನುವಾದಗಳನ್ನು ಕ್ರಮವಾಗಿ ಹಿಡಿದಿದ್ದಾರೆ.



"ನನಗೆ ನೊಬೆಲ್ ಪ್ರಶಸ್ತಿ ಬಂದಾಗ, ನೊಬೆಲ್ ವಸ್ತುಸಂಗ್ರಹಾಲಯಕ್ಕೆ ಒಂದು ವಸ್ತುವನ್ನು ದಾನ ಮಾಡಲು ಕೇಳಲಾಯಿತು. ಭಾರತದಾದ್ಯಂತ ಮಕ್ಕಳು ಓದಲು ಕಲಿಯಲು ಸಹಾಯ ಮಾಡುತ್ತಿರುವ ಪ್ರಥಮ್ ಬುಕ್ಸ್‌ನ ಪಾತ್ರದಿಂದ ಪ್ರಭಾವಿತಳಾದ ನಾನು ಅದರ ಹಲವು ಪುಸ್ತಕಗಳನ್ನು ನೀಡಲು ನಿರ್ಧರಿಸಿದೆ. ಈಗ ನನ್ನ ಪುಸ್ತಕಗಳನ್ನು ಪ್ರಥಮ್ ಬುಕ್ಸ್ ಬೇರೆ ಬೇರೆ ಭಾಷೆಗಳಲ್ಲಿ ತಂದಿದೆ ಎನ್ನುವುದು ನನಗೆ ಹೆಮ್ಮೆ. ಅದಕ್ಕಾಗಿ ಧನ್ಯವಾದಗಳು. ಯುವ ಓದುಗರು ನೀಲು ಮತ್ತು ಅವರ ಸ್ನೇಹಿತರ ಕತೆಗಳನ್ನು ಆನಂದಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದು ಒಂದು ಬದಲಾವಣೆ ತರಬಹುದು. ಶಿಕ್ಷಕರು ಮತ್ತು ಪೋಷಕರು ಸಹ ಅವುಗಳನ್ನು ಬಳಸುತ್ತಾರೆ ಎಂದು ನಾನು ಭಾವಿಸುತ್ತೇನೆ."

- ಎಸ್ಥರ್ ದುಫ್ಲೋ, ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ವಿಜೇತೆ.

# ಓದುವ ಭಾರತ ನಿರ್ಮಿಸುವ ಸಂಭ್ರಮ



ಪ್ರಥಮ್ ಬುಕ್ಸ್ ದೇಶಾದ್ಯಂತದ ಪಾಲುದಾರರೊಂದಿಗೆ ತನ್ನ ಸಹಯೋಗವನ್ನು ಇನ್ನಷ್ಟು ಹೆಚ್ಚಿಸುತ್ತಾ, ಮಕ್ಕಳು ಎಲ್ಲೇ ಇದ್ದರೂ, ಉತ್ತಮ ಗುಣಮಟ್ಟದ ಮಕ್ಕಳ ಸಾಹಿತ್ಯವನ್ನು ಹೆಚ್ಚಿನ ಮಕ್ಕಳಿಗೆ ತಲುಪಿಸುವುದನ್ನು ಮುಂದುವರಿಸಿದೆ.

2025ರಲ್ಲಿ, ಜೈಪುರ ಸಾಹಿತ್ಯ ಉತ್ಸವದೊಂದಿಗೆ ನಮ್ಮ school outreach partnershipನ 15 ವರ್ಷಗಳನ್ನು ಆಚರಿಸಿದೆವು. ಇದು ಕತೆಗಳು, ಆಲೋಚನೆಗಳು ಮತ್ತು ಸ್ಫೂರ್ತಿಯನ್ನು ನೇರವಾಗಿ ತರಗತಿಗಳಿಗೆ ತಂದ ಸಹಯೋಗವಾಗಿದೆ. ಕಳೆದ ಒಂದೂವರೆ ದಶಕದಲ್ಲಿ, ಈ ಪಾಲುದಾರಿಕೆಯು 500 ಸಂಸ್ಥೆಗಳಲ್ಲಿ 1,000ಕ್ಕೂ ಹೆಚ್ಚು ಸಂವಾದಾತ್ಮಕ ಸೆಷನ್ನುಗಳನ್ನು ಸಕ್ರಿಯಗೊಳಿಸಿ, 50,000ಕ್ಕೂ ಹೆಚ್ಚು ಮಕ್ಕಳನ್ನು ತಲುಪಿದೆ. ಈ ಸೆಷನ್ನುಗಳು ಮಕ್ಕಳಿಗೆ ಇತಿಹಾಸ, ತಂತ್ರಜ್ಞಾನ ಮತ್ತು ವಿಜ್ಞಾನದ ಪ್ರಪಂಚಗಳನ್ನು ತೆರೆದಿಟ್ಟವು. ಈ ವರ್ಷ, ಅಕ್ಷತಾ ಮೂರ್ತಿ, ಕಲ್ಲೋಲ್ ಭಟ್ಟಾಚಾರ್ ಅವರು ಮತ್ತು ರಾಯಭಾರಿ ಹೆರ್ವೆ ಡೆಲ್ಫಿನ್ ಅಂತಹ ಭಾಷಣಕಾರರು ನಮ್ಮ ಯುವ ಪ್ರೇಕ್ಷಕರಲ್ಲಿ ಸೃಜನಶೀಲತೆ ಮತ್ತು ಓದುವ ಪ್ರೀತಿಯನ್ನು ಹುಟ್ಟುಹಾಕಲು ಸಹಾಯ ಮಾಡಿದರು.

ಜಾರ್ಖಂಡ್‌ನ ಗುಮ್ಲಾ ಪುಸ್ತಕ ಮೇಳ ಮತ್ತು ದೆಹಲಿಯಲ್ಲಿ ನಡೆದ 2025ರ ವಿಶ್ವ ಪುಸ್ತಕ ಮೇಳದಲ್ಲಿ ಭಾಗವಹಿಸುವ ಮೂಲಕ ನಮ್ಮ ವ್ಯಾಪ್ತಿ ಮತ್ತಷ್ಟು ವಿಸ್ತರಿಸಿತು, ಶಿಕ್ಷಕರು ಮತ್ತು ಸಮುದಾಯಗಳಿಗೆ ಪುಸ್ತಕಗಳು ಮತ್ತು ಓದುವ ಅನುಭವಗಳ ಲಭ್ಯತೆಯನ್ನು ಬಲಪಡಿಸಿತು.

## ಸರ್ಕಾರಿ ಪಾಲುದಾರಿಕೆಗಳ ಮೂಲಕ ಲಭ್ಯತೆಯನ್ನು ಬಲಪಡಿಸುವುದು

ಈ ವರ್ಷ, ಪ್ರಥಮ್ ಬುಕ್ಸ್ 1.07 ಮಿಲಿಯನ್ ಚಿತ್ರ ಪುಸ್ತಕಗಳನ್ನು ಹಂಚಿದೆ. ಇವು ಭಾರತದಾದ್ಯಂತ ಅಂದಾಜು 3.5 ಮಿಲಿಯನ್ ಮಕ್ಕಳನ್ನು ತಲುಪಿವೆ. ಜಾರ್ಖಂಡ್, ತೆಲಂಗಾಣ, ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದಿಯುಗಳ ಸಂಸ್ಥೆಗಳು ಮತ್ತು ಶಿಕ್ಷಣ ಇಲಾಖೆಗಳೊಂದಿಗೆ ನಿಕಟ ಸಹಯೋಗದ ಮೂಲಕ, ನಮ್ಮ ಪುಸ್ತಕಗಳು ಅತ್ಯಂತ ಹಿಂದುಳಿದ ಭೌಗೋಳಿಕ ಪ್ರದೇಶಗಳಲ್ಲಿನ ತರಗತಿ ಮತ್ತು ಕಲಿಕಾ ಕೇಂದ್ರಗಳನ್ನು ತಲುಪಿವೆ ಎಂದು ನಾವು ಖಚಿತಪಡಿಸಿಕೊಂಡಿದ್ದೇವೆ.

ಕತೆ ಪುಸ್ತಕಗಳ ಮೂಲಕ ಆರಂಭಿಕ STEM ಶಿಕ್ಷಣವನ್ನು ಉತ್ತೇಜಿಸಲು ಶಿಕ್ಷಣ ಇಲಾಖೆಗಳೊಂದಿಗೆ ನಡೆಯುತ್ತಿರುವ ನಮ್ಮ ಸಾಂಸ್ಥಿಕ ಪಾಲುದಾರಿಕೆಗಳನ್ನು ನಾವು ಇನ್ನಷ್ಟು ವೃದ್ಧಿಪಡಿಸುತ್ತಿದ್ದೇವೆ. ಸ್ಟೋರಿವೀವರ್‌ನ STEM ಸಾಕ್ಷರತಾ ಕಾರ್ಯಕ್ರಮದ ಮೂಲಕ, ಈಗಷ್ಟೇ ಕಲಿಕೆಯನ್ನು ಆರಂಭಿಸಿರುವವರಲ್ಲಿ ಕುತೂಹಲ ಮೂಡಿಸಲು ಮತ್ತು STEM ಚಿಂತನೆಯನ್ನು ಅಭಿವೃದ್ಧಿಪಡಿಸುವಲ್ಲಿ ಚಿತ್ರ ಕತೆ ಪುಸ್ತಕಗಳು ಎಷ್ಟು ಪ್ರಭಾವಶಾಲಿ ಆಗಬಹುದು ಎಂಬುದನ್ನು ನಾವು ಪ್ರದರ್ಶಿಸಿದ್ದೇವೆ. ಮಹಾರಾಷ್ಟ್ರದಲ್ಲಿ, ಪುರಸಭೆಯ ಶಾಲೆಗಳಲ್ಲಿ STEM-ವಿಷಯದ ಓದುವ ಅಭಿಯಾನವನ್ನು ಪ್ರಾರಂಭಿಸಲು ನಾವು ಪಿಂಪ್ರಿ-ಚಿಂಚ್‌ವಾಡ್

ಮುನ್ಸಿಪಲ್ ಕಾರ್ಪೊರೇಷನ್ (PCMC) ನೊಂದಿಗೆ ಸಹಯೋಗ ಹೊಂದಿದ್ದೇವೆ. ಈ ಅಭಿಯಾನವು ವಾರದ ಚಿತ್ರ ಪುಸ್ತಕಗಳನ್ನು ಪ್ರಾಯೋಗಿಕ STEM ಚಟುವಟಿಕೆಗಳೊಂದಿಗೆ ಸಂಯೋಜಿಸಿತು, ಬಳಸಲು ಸುಲಭವಾದ, ಪ್ಲಗ್-ಅಂಡ್-ಪ್ಲೇ ಮಾಡ್ಯೂಲ್‌ಗಳ ಮೂಲಕ ವಿತರಿಸಲಾಯಿತು. ಕತೆಗಳಲ್ಲಿ ಅಡವಾಗಿರುವ ವೈಜ್ಞಾನಿಕ ತತ್ವಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವಿವರಿಸಲು ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ತರಬೇತಿ ನೀಡಲಾಯಿತು. ವಾಟ್ಸಾಪ್ ಗುಂಪುಗಳು ಪರಸ್ಪರ ಕಲಿಕೆ ಮತ್ತು ತ್ವರಿತ ಬೆಂಬಲಕ್ಕಾಗಿ ಒಂದು ರೋಮಾಂಚಕ ವೇದಿಕೆಯಾಗಿ ಮಾರ್ಪಟ್ಟವು.

## ದಾನದ ಆನಂದದ ಮೂಲಕ ಲಭ್ಯತೆಯನ್ನು ಬಲಪಡಿಸುವುದು

PRATHAM BOOKS
donate-a-book

ಪ್ರಥಮ್ ಬುಕ್ಸ್‌ನ ಡೊನೇಟ್-ಎ-ಬುಕ್ ಒಂದು ಕ್ರೌಡ್‌ಫಂಡಿಂಗ್ ವೇದಿಕೆ. ದೂರದ ಪ್ರದೇಶಗಳ ಮಕ್ಕಳಿಗೆ ಚಿತ್ರ ಪುಸ್ತಕಗಳು ಸಿಗುವಂತೆ ಸಹಾಯ ಮಾಡಲು ಹತ್ತು ವರ್ಷಗಳ ಹಿಂದೆ ಡೊನೇಟ್-ಎ-ಬುಕ್ ಅನ್ನು ಪ್ರಾರಂಭಿಸಲಾಯಿತು. ಶಿಕ್ಷಕರು, ಗ್ರಂಥಪಾಲಕರು, ಎನ್‌ಜಿಒಗಳು ಅಥವಾ ವ್ಯಕ್ತಿಗಳು ಮಕ್ಕಳಿಗಾಗಿ ದೇಣಿಗೆ ಕೇಳುತ್ತಾರೆ. ಅದರ ಮೂಲಕ ಮಕ್ಕಳಿಗೆ ಪೋರ್ಟಬಲ್ ಗ್ರಂಥಾಲಯ ಸಿಗುವಂತೆ ಮಾಡಲಾಗುತ್ತದೆ. ಪ್ರಥಮ್ ಬುಕ್ಸ್ 32ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ ಕೈಗೆಟುಕುವ, ಉತ್ತಮ ಗುಣಮಟ್ಟದ ಚಿತ್ರ ಪುಸ್ತಕಗಳ ಪೋರ್ಟಬಲ್ ಗ್ರಂಥಾಲಯವನ್ನು ನೀಡುತ್ತದೆ. ಈ ವರ್ಷ, ವಿಲೇಜ್ ಲ್ಯಾಬ್ ಫೌಂಡೇಶನ್‌ನ ದೇಣಿಗೆ ಸಂಗ್ರಹದ ಸಹಾಯದಿಂದ, ನುಬ್ರಾ ಕಣಿವೆಯಲ್ಲಿ ಮೊದಲ ಮಕ್ಕಳ ಗ್ರಂಥಾಲಯವನ್ನು ಪ್ರಾರಂಭಿಸಿತು. ವಿವಿಧ ಸಮುದಾಯ ಸ್ಥಳಗಳಲ್ಲಿ ಇಂಗ್ಲಿಷ್ ಮತ್ತು ಭೋಟಿ (Bhoti) ಭಾಷೆಯಲ್ಲಿ 2,000 ಚಿತ್ರ ಪುಸ್ತಕಗಳನ್ನು ಇರಿಸಿತು.

ಇತರ ಗಮನಾರ್ಹ ದೇಣಿಗೆ ಸಂಗ್ರಹಗಳಲ್ಲಿ ಮೂರು ರಾಜ್ಯಗಳ 60 ಪ್ರಾಥಮಿಕ ಶಾಲೆಗಳಿಗೆ ಗ್ರಂಥಾಲಯಗಳನ್ನು ಒದಗಿಸಿದ IIM Women Book Magic Fund ಮತ್ತು ಪುಣೆಯ ಭಾರತಿ ಆಸ್ಪತ್ರೆಯ NICUನಲ್ಲಿರುವ ಶಿಶುಗಳಿಗೆ ಅವರ ತಾಯಂದಿರಿಗೆ ಓದಲು ಸಚಿತ್ರ ಪುಸ್ತಕಗಳನ್ನು ತಂದ Babies With Books Read-a-thon ಸೇರಿವೆ.

ದಾನ ಉತ್ಸವದ ಸಂದರ್ಭದಲ್ಲಿ, ಡೋನೇಟ್-ಎ-ಬುಕ್ ಸೇಲ್ಸ್‌ಫೋರ್ಸ್ ಜೊತೆ ಪಾಲುದಾರಿಕೆ ಮಾಡಿಕೊಂಡು, ಉದ್ಯೋಗಿಗಳು ದೇಣಿಗೆ ನೀಡುವ Sapno Ki Library ಎಂಬ ಅಭಿಯಾನವನ್ನು ಪ್ರಾರಂಭಿಸಿತು. ಒಂದು ತಿಂಗಳೊಳಗೆ, 300ಕ್ಕೂ ಹೆಚ್ಚು ಸೇಲ್ಸ್‌ಫೋರ್ಸ್ ಉದ್ಯೋಗಿಗಳು ಛತ್ತೀಸ್‌ಗಢ, ಉತ್ತರಾಖಂಡ ಮತ್ತು ಜಾರ್ಖಂಡ್‌ನ ಗ್ರಾಮೀಣ ಪ್ರದೇಶಗಳಲ್ಲಿ 4,000ಕ್ಕೂ ಹೆಚ್ಚು ಸೌಲಭ್ಯ ವಂಚಿತ ಮಕ್ಕಳಿಗೆ ಗ್ರಂಥಾಲಯಗಳನ್ನು ನಿರ್ಮಿಸಲು ಸಹಾಯ ಮಾಡಿದರು.

## ನಿಮ್ಮ ಕ್ರೌಡ್‌ಫಂಡಿಂಗ್ ದೇಣಿಗೆ ಹೇಗೆ ಬದಲಾವಣೆಯನ್ನು ತರುತ್ತದೆ

ಕ್ರೌಡ್‌ಫಂಡಿಂಗ್ ದೇಣಿಗೆ ಎಂಥ ಬದಲಾವಣೆಯನ್ನು ತರುತ್ತದೆ ಎಂಬುದನ್ನು ಊಹಿಸುವುದು ಕಷ್ಟ. ಆದ್ದರಿಂದ, ನಮ್ಮ ಬೆಂಬಲಿಗರ ಔದಾರ್ಯದಿಂದಾಗಿ ಈ ವರ್ಷ ನಡೆದ 250ಕ್ಕೂ ಹೆಚ್ಚು ದೇಣಿಗೆ ಸಂಗ್ರಹಗಳಲ್ಲಿ ಒಂದನ್ನು ನಾವು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇವೆ.

ಈ ಕತೆಯನ್ನು ಮಣಿಪುರದ ಚುರಾಚಂದ್‌ಪುರದಲ್ಲಿ 200 ಮಕ್ಕಳಿಗಾಗಿ ದೇಣಿಗೆ ಸಂಗ್ರಹವನ್ನು ಆಯೋಜಿಸಿದ್ದ Saplings Library Projectನ ಜೇಮ್ಸ್ ಟಂಗ್ಲಟ್ (James Tunglut) ಹಂಚಿಕೊಂಡಿದ್ದಾರೆ.

ಚುರಾಚಂದ್‌ಪುರದ 'ಲೈನಾತ್ (Lainat)' ಎಂಬ ಮಕ್ಕಳ ಮನೆ, ಕಾಡು ಬೆಟ್ಟಗಳು ಮತ್ತು ಸಂಘರ್ಷಭರಿತ ಬೀದಿಗಳ ನಡುವೆ ನೆಲೆಸಿದೆ. ಅಲ್ಲಿನ ಮಕ್ಕಳ ಗುಂಪು ಅವರ ಜೀವಮಾನದಲ್ಲಿ ನಿಜವಾದ ಪುಸ್ತಕವನ್ನು ಎಂದಿಗೂ ಹಿಡಿದಿರಲಿಲ್ಲ. ಮಲಗುವ ಸಮಯದಲ್ಲಿ ಚಿತ್ರ ಪುಸ್ತಕಗಳು ಇರಲಿಲ್ಲ, ತರಗತಿಯಲ್ಲಿ ಕತೆ ಹೇಳುವ ಸಮಯವಿರಲಿಲ್ಲ ಮತ್ತು ಗ್ರಂಥಾಲಯವಿರಲಿಲ್ಲ. ಅವರಲ್ಲಿ ಹೆಚ್ಚಿನವರು ಹಿಂಸೆ ತಡೆಯಲಾರದೆ ಓಡಿ ಹೋಗಿದ್ದರು - ಕೆಲವರು ತಮ್ಮ ಹೆತ್ತವರನ್ನು ಕಳೆದುಕೊಂಡಿದ್ದರೆ, ಇನ್ನು ಕೆಲವರು ತಮ್ಮ ಕುಟುಂಬಗಳಿಂದ ಬೇರ್ಪಟ್ಟಿದ್ದರು. ಪ್ರಪಂಚದ ಬಗ್ಗೆ ಅವರು ಏನಾದರೂ ತಿಳಿದಿದ್ದರೆ ಅದೆಲ್ಲವೂ ಅವರ ಸುತ್ತಮುತ್ತಲಿನ; ಶಿಬಿರಗಳು, ಬೆಟ್ಟಗಳು ಮತ್ತು ಮೌನದಿಂದ. ಪ್ರಥಮ್ ಬುಕ್ಸ್‌ನಿಂದ ಚಿತ್ರ ಪುಸ್ತಕ ಗ್ರಂಥಾಲಯ ಬಂದಾಗ, ಅನೇಕ ಮಕ್ಕಳು ತಮ್ಮ ಮೊಟ್ಟ ಮೊದಲ ಹರಿಯದ ಅಥವಾ ಬರೆಯದ ಕತೆ ಪುಸ್ತಕವನ್ನು ಹಿಡಿದಿದ್ದು. ಮಕ್ಕಳು ತಾವಿದ್ದ ಕೋಣೆಯ ಒಂದು ಭಾಗವನ್ನು ಸ್ವಚ್ಛಗೊಳಿಸಿದರು. ಹಳೆಯ ಮರದ ಕಪಾಟು ಹುಡುಕಿ ಧೂಳು ಒರೆಸಿ ಬಂದ ಪುಸ್ತಕಗಳನ್ನು ಜೋಡಿಸಿದರು. ಅದು ಕೇವಲ ಓದುವ ಜಾಗವಾಗಿರಲಿಲ್ಲ - ಅದು

ಸಾಧ್ಯತೆಗಳ ಜಾಗವಾಗಿತ್ತು. ಕತೆಗಳು, ಕುತೂಹಲ, ನಗು ಮತ್ತು ನೆಮ್ಮದಿಯ ತರುವ ಜಾಗವಾಗಿತ್ತು. ತುಂಬಾ ಕಳೆದುಕೊಂಡ ಮಕ್ಕಳಿಗೆ, ಅದು ದೊಡ್ಡ ಪ್ರಪಂಚಕ್ಕೆ ಅವರ ಮೊದಲ ಕಿಟಕಿಯಾಗಿತ್ತು. ಮತ್ತು ಇದೆಲ್ಲವೂ ಸಾಧ್ಯವಾದದ್ದು ನಾವು ಅವರಿಗೆ ಅವರ ಮೊದಲ ಪುಸ್ತಕವನ್ನು ನೀಡಲು ಸಾಧ್ಯವಾದ ಕಾರಣ.

ಡೊನೇಟ್-ಎ-ಬುಕ್ ಅನ್ನು ಏಕೆ ಆರಿಸಿಕೊಂಡಿರಿ ಎಂದು ಕೇಳಿದಾಗ, ಅವರು ಹೇಳಿದ್ದು:

“ಡೊನೇಟ್-ಎ-ಬುಕ್ ಬಗ್ಗೆ ನನಗೆ ಅತ್ಯಂತ ಇಷ್ಟವಾದ ವಿಷಯವೆಂದರೆ ಅದು ನಮ್ಮಲ್ಲಿ ಅನೇಕ ಮಕ್ಕಳಿಗೆ ತಮ್ಮದೇ ಆದ ಜಗತ್ತನ್ನು ಕಂಡುಕೊಳ್ಳುವ ಸಂತೋಷವನ್ನು ನೀಡುತ್ತದೆ. ಒಂದೇ ಪುಸ್ತಕವು ಮಗುವಿನ ಕಲ್ಪನೆಯನ್ನು ಬೆಳಗಿಸಬಹುದು, ಸಾಂತ್ವನ ನೀಡಬಹುದು, ಕನಸುಗಳನ್ನು ಪ್ರೇರೇಪಿಸಬಹುದು ಅಥವಾ ಎಂದಿಗೂ ಸಾಧ್ಯವಾಗದ ಭವಿಷ್ಯಕ್ಕೆ ಬಾಗಿಲು ತೆರೆಯಬಹುದು. ಇದು ಕೇವಲ ಸಾಕ್ಷರತೆಯ ಬಗ್ಗೆ ಅಲ್ಲ - ಇದು ಘನತೆ, ಸಾಧ್ಯತೆ ಮತ್ತು ಭರವಸೆಯ ಬಗ್ಗೆ. ಮಗುವೊಂದು ತನ್ನ ಮೊದಲ ಪುಸ್ತಕವನ್ನು ಹಿಡಿದುಕೊಂಡು ‘ಈ ಕಥೆ ನನಗಾಗಿದೆ’ ಎಂದು ಅರಿತುಕೊಳ್ಳುವುದನ್ನು ನೋಡುವುದು ನಿಜಕ್ಕೂ ಅದ್ಭುತ ಅನುಭವ. ಡೊನೇಟ್-ಎ-ಬುಕ್ ಪ್ರತಿ ಬಾರಿಯೂ ಇದನ್ನು ಇನ್ನಷ್ಟು ಅರ್ಥಪೂರ್ಣವಾಗಿಸುತ್ತದೆ.”

**1100+ ದಾನಿಗಳು**

**40.6 ಸಾವಿರ ಚಿತ್ರ ಪುಸ್ತಕಗಳನ್ನು ವಿತರಿಸಲಾಗಿದೆ**

**2.7 ಲಕ್ಷ ಮಕ್ಕಳು ಮೇಲೆ ಪರಿಣಾಮ ಬೀರಿದೆ**



# ಸಮುದಾಯಗಳ ಸಂಭ್ರಮ

376+ ಭಾಷೆಗಳು

32 ಮಿಲಿಯನ್ ರೀಡ್ಸ್

64 ಸಾವಿರ ಕತೆಗಳು

PRATHAM BOOKS storyweaver

ಪ್ರಥಮ್ ಬುಕ್ಸ್‌ನ ಸ್ಟೋರಿವೀವರ್ ಮಕ್ಕಳ ಶಿಕ್ಷಣದಲ್ಲಿ ಪ್ರಮಾಣೀಕೃತ ಡಿಜಿಟಲ್ ಸಾರ್ವಜನಿಕ ಉತ್ಪನ್ನವಾಗಿದ್ದು, ಅಲ್ಲಿ ಯಾರಾದರೂ ಚಿತ್ರ ಪುಸ್ತಕಗಳನ್ನು ಓದಬಹುದು, ರಚಿಸಬಹುದು ಮತ್ತು ಅನುವಾದಿಸಬಹುದು. ನಮ್ಮ ಹತ್ತನೇ ವರ್ಷದಲ್ಲಿ, ಓದುವ ಆನಂದವನ್ನು ಹರಡಲು ನಾವು foster ecosystem ಸಹಯೋಗಗಳನ್ನು ಬೆಳೆಸುವುದನ್ನು ಮುಂದುವರಿಸಿದ್ದೇವೆ. ಸರ್ಕಾರಗಳು, ನಾಗರಿಕ ಸಮಾಜ ಸಂಘಟನೆ ಮತ್ತು ತಳಮಟ್ಟದ ನಾಯಕರೊಂದಿಗೆ ಕೈಜೋಡಿಸಿ, ಈ ಮೂಲಕ ಹೆಚ್ಚು ಹೆಚ್ಚು ಮಕ್ಕಳನ್ನು ಓದುವ ಆಂದೋಲನದಲ್ಲಿ ಸೇರಿಸಿಕೊಳ್ಳುತ್ತೇವೆ.

ರಾಜಸ್ಥಾನ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ, ಸ್ಟೋರಿವೀವರ್‌ನ ಆಯ್ದ ಹಿಂದಿ ಪುಸ್ತಕಗಳು 'ಪ್ರಕಾಶ್ ರಾಜಸ್ಥಾನ್ ಇನಿಶಿಯೇಟಿವ್'ನ ಭಾಗವಾದವು. ಒಂದು ತಿಂಗಳ ಕಾಲ ನಡೆದ ಈ ಅಭಿಯಾನದಲ್ಲಿ 4,000ಕ್ಕೂ ಹೆಚ್ಚು ತರಗತಿಳಲ್ಲಿ ಸುಮಾರು 35,000 ಪುಸ್ತಕಗಳನ್ನು ಓದಲಾಯಿತು. ಎಕ್ಸ್‌ಸ್ಟೆಪ್‌ನ 'ಬಚ್ಪನ್ ಮನಾವ್ರೋ' ಭಾಗವಾಗಿ, ನಾವು ಸಂವಾದಾತ್ಮಕ ವೆಬಿನಾರ್‌ಗಳು ಮತ್ತು ಮಾಸ್ಟರ್ ಕ್ಲಾಸ್‌ಗಳ ಮೂಲಕ ಓದುವುದನ್ನು ಉತ್ತೇಜಿಸಿದ್ದೇವೆ. ಈ ಕಾರ್ಯಕ್ರಮಗಳು ಗ್ರಂಥಪಾಲಕರು, ಶಿಕ್ಷಕರು, ಎನ್‌ಜಿಓಗಳು ಮತ್ತು ಅನುವಾದಕರನ್ನು ಒಟ್ಟುಗೂಡಿಸಿದವು. ಈ ಸಹಯೋಗಗಳು ನಮ್ಮ ನಮ್ಮ ಕೆಲಸಕ್ಕೆ ಹೆಚ್ಚಿನ ಮಹತ್ವ ತಂದುಕೊಟ್ಟು, ನಮ್ಮ ನೆಟ್‌ವರ್ಕ್ ಅನ್ನು ವಿಸ್ತರಿಸಿವೆ. ಓದಿನ ಖುಷಿಯನ್ನು ಹಂಚುವ ಉದ್ದೇಶವನ್ನು ಮುನ್ನಡೆಸುವ ನಮ್ಮ ಪ್ರಯತ್ನಗಳನ್ನು ಬಲಪಡಿಸಿವೆ.

## ಮಹಾರಾಷ್ಟ್ರದ ಸಂಭಾಜಿನಗರದಲ್ಲಿ ಉರ್ದು ಕಲಿಸುವ ಆಂದೋಲನಕ್ಕೆ ಚಾಲನೆ



ಮಹಾರಾಷ್ಟ್ರದ ಸಂಭಾಜಿನಗರದ ಪ್ರಾದೇಶಿಕ ಶೈಕ್ಷಣಿಕ ಪ್ರಾಧಿಕಾರದ (RAA) ಶಿಕ್ಷಕರು ಪ್ರಥಮ್ ಬುಕ್ಸ್‌ನ ಅನುವಾದ ಕಾರ್ಯಾಗಾರಗಳಲ್ಲಿ ಭಾಗವಹಿಸಿ 80ಕ್ಕೂ ಹೆಚ್ಚು ಉರ್ದು ಚಿತ್ರ ಪುಸ್ತಕಗಳನ್ನು ರಚಿಸಿ, ಬಳಸಿದರು. ತರಗತಿಗಳಲ್ಲಿ ಸ್ಟೋರಿವೀವರ್ ಬಳಸಿಕೊಂಡು ತಮ್ಮ ವಿದ್ಯಾರ್ಥಿಗಳಲ್ಲಿ ಒಂದು ರೋಮಾಂಚಕ ಓದುವ ಆಂದೋಲವನ್ನು ಹುಟ್ಟುಹಾಕಿದರು. ವ್ಯವಸ್ಥಿತ ಬೆಂಬಲ, ಸ್ಥಳೀಯ ಮಾಲಿಕತ್ವ ಮತ್ತು ಡಿಜಿಟಲ್ ಪ್ರವೇಶ ಈ ಮೂರರ ಸಂಯೋಜನೆ ಓದುವ ಮಕ್ಕಳಲ್ಲಿ ಹೇಗೆ ಶಾಶ್ವತ ಬದಲಾವಣೆಯನ್ನು ಯಶಸ್ವಿಯಾಗಿ ಸೃಷ್ಟಿಸಬಹುದು ಎಂಬುದಕ್ಕೆ ಇದು ಒಂದು ಪ್ರಮುಖ ಉದಾಹರಣೆ.



## ಒಂದು ದಿನ ಒಂದು ಕತೆ: ಸಮುದಾಯದ ಓದು ಪ್ರಥಮ್ ಬುಕ್ಸ್‌ನ ಪ್ರಮುಖ ಉಪಕ್ರಮ

ಪ್ರತಿ ಸೆಪ್ಟೆಂಬರ್‌ನಲ್ಲಿ, ನಾವು ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನು ಒಂದು ದಿನ, ಒಂದು ಕತೆಯೊಂದಿಗೆ ಆಚರಿಸುತ್ತೇವೆ, ಏಕೆಂದರೆ ರೀಡಿಂಗ್ ಚಾಂಪಿಯನ್ಸ್ ಭಾರತ ಮತ್ತು ವಿದೇಶಗಳಲ್ಲಿ ಶಾಲೆ, ಗ್ರಂಥಾಲಯ, ಉದ್ಯಾನ ಮತ್ತು ಮನೆಗಳಲ್ಲಿ ಕತೆ ಹೇಳುವ ಸೆಷನ್ನುಗಳನ್ನು ನಡೆಸುತ್ತಾರೆ. ಈ ವರ್ಷ ಹೆಚ್ಚು ಜನಪ್ರಿಯವಾದ ಶೀರ್ಷಿಕೆಗಳು: ಲವ್ಲೀನ್ ಮಿಶ್ರಾ ಬರೆದಿರುವ, ಪ್ರಿಯಾ ಕುರಿಯನ್ ಚಿತ್ರಿಸಿರುವ ಓಡಿಸೋದು ಹೇಗಪ್ಪ ಈ ಜ್ವರ?, ನೇಹಾ ಸಿಂಘ್ ಮತ್ತು ಸಬಾ ಖಾನ್ ಬರೆದಿರುವ ಅಲಾಫಿಯಾ ಹಸನ್ ಮತ್ತು ಪೈರೋ ಡ್ರಾಸ್ ಚಿತ್ರಿಸಿರುವ ಗೋಲ್! ಕತೆಯ ಪುಸ್ತಕಗಳು ಸಮುದಾಯಗಳನ್ನು ಒಟ್ಟುಗೂಡಿಸಿದವು. 1,500+ ನೋಂದಣಿಗಳೊಂದಿಗೆ, ಭಾರತ, ಸಿಂಗಾಪುರ, ದುಬೈ, USA ಮತ್ತು ಶ್ರೀಲಂಕಾದಲ್ಲಿ ಸೆಷನ್ನುಗಳು ನಡೆದವು. ನಮ್ಮ ಚಾಂಪಿಯನ್ಸ್ 9,000ಕ್ಕೂ ಹೆಚ್ಚು ಸೆಷನ್ನುಗಳನ್ನು ಆಯೋಜಿಸಿದ್ದು, ~60,000 ಮಕ್ಕಳನ್ನು ತಲುಪಿವೆ.

**9,000 000 ರೀಡಿಂಗ್ ಸೆಷನ್ನುಗಳು**

**1,500 ಸ್ವಯಂಸೇವಕರು**

**60 ಸಾವಿರ ಮಕ್ಕಳನ್ನು ತಲುಪಲಾಗಿದೆ**










# ಪ್ರಶಸ್ತಿಗಳ ಗರಿ




## ನಾನು ಮತ್ತು ಆಫ್ರೋ

ಪರಾಗ್ ಹಾನರ್ ಲಿಸ್ಟ್ 2024

ಮೆಕ್ಲಿ ಗೋಭಾಯ್ ಅತ್ಯುತ್ತಮ ಮಕ್ಕಳ ಪುಸ್ತಕ ಇಲ್ಲಸ್ಟ್ರೇಟರ್ ಪ್ರಶಸ್ತಿ (ಮೂರನೇ ಆವೃತ್ತಿ) - ವಿಜೇತ

ಬಿನೋದ್ ಕನೋರಿಯಾ ಮಕ್ಕಳ ಪುಸ್ತಕ ಪ್ರಶಸ್ತಿಗಳು - ಶಾರ್ಟ್ ಲಿಸ್ಟ್, ಆರಂಭಿಕ ಓದುಗರು (ಇಂಗ್ಲಿಷ್) 4–7 ವರ್ಷಗಳು




## ಚಂದ್ರನ ಪಿಜ್ಜಾ

ಕಳಿಂಗ ಸಾಹಿತ್ಯ ಉತ್ಸವ ಪುಸ್ತಕ ಪ್ರಶಸ್ತಿ 2024 – ಶಾರ್ಟ್ ಲಿಸ್ಟ್



## ಗಪ್ಪು ಗೋಲಾ (ಹಿಂದಿ)

ಪರಾಗ್ ಹಾನರ್ ಲಿಸ್ಟ್ 2024 (ಹಿಂದಿ)
FICCI ಪಬ್ಲಿಷಿಂಗ್ ಪ್ರಶಸ್ತಿಗಳು 2023 – ವರ್ಷದ ಮಕ್ಕಳ ಪುಸ್ತಕ (10 ವರ್ಷದೊಳಗಿನವರು, ಹಿಂದಿ)




## ಗ್ರೇಸ್

ಪರಾಗ್ ಹಾನರ್ ಲಿಸ್ಟ್ 2024



## ಹಲೋ, ಸೂರ್ಯ!

ಪರಾಗ್ ಹಾನರ್ ಲಿಸ್ಟ್ 2024

ಬಿನೋದ್ ಕನೋರಿಯಾ ಮಕ್ಕಳ ಪುಸ್ತಕ ಪ್ರಶಸ್ತಿಗಳು 2023 – ವಿಜೇತ, ಆರಂಭಿಕ ಓದುಗರು (6–8 ವರ್ಷಗಳು)


ಗ್ರೀನ್ ಲಿಟ್ರೆಚರ್ ಫೆಸ್ಟಿವಲ್ 2024 –
ವರ್ಷದ ಪುಸ್ತಕ (ಮಕ್ಕಳ ವಿಭಾಗ)






## ನಮ್ಮ ಗ್ರಂಥಾಲಯ


ಪರಾಗ್ ಹಾನರ್ ಲಿಸ್ಟ್ 2024




## ಮರಿ ಸಿಪಿಲೆಯ ಖುಷಿ!

ಅಟ್ಟ ಗಲಾಟ್ಟಾ-ಬೆಂಗಳೂರು ಸಾಹಿತ್ಯ ಉತ್ಸವ ಪುಸ್ತಕ

ಬಹುಮಾನ 2024 – ಮಕ್ಕಳ ಚಿತ್ರ ಪುಸ್ತಕ ಅತ್ಯುತ್ತಮ ಇಲ್ಲಸ್ಟ್ರೇಷನ್ (ಶಾರ್ಟ್ ಲಿಸ್ಟ್)




## ನಮಗೆ ಭರವಸೆಯಿದೆ

ಪರಾಗ್ ಹಾನರ್ ಲಿಸ್ಟ್ 2024




## ಭಾನು ಮನೆಗೆ ಹೋದಾಗ

ಬಿನೋದ್ ಕನೋರಿಯಾ ಮಕ್ಕಳ ಪುಸ್ತಕ ಪ್ರಶಸ್ತಿಗಳು - ಶಾರ್ಟ್ ಲಿಸ್ಟ್




## ನಮ್ಮ ಮನೆ ಎಂದರೆ

ಪರಾಗ್ ಹಾನರ್ ಲಿಸ್ಟ್ 2024

FICCI ಪ್ರಕಾಶನ ಪ್ರಶಸ್ತಿಗಳು 2023 – ವರ್ಷದ ಮಕ್ಕಳ ಪುಸ್ತಕ (10 ವರ್ಷಕ್ಕಿಂತ ಕಡಿಮೆ, ಇಂಗ್ಲಿಷ್)

ನೀವ್ ಬುಕ್ ಅವಾರ್ಡ್ಸ್ – ಶಾರ್ಟ್ ಲಿಸ್ಟ್




## ಕತ್ತಲ ಹ್ಯಾಂಗ ಸದ್ದು ಮಾಡ್ತೈತಿ?

ವ್ಯಾಲಿ ಆಫ್ ವರ್ಡ್ಸ್ - ಶಾರ್ಟ್ ಲಿಸ್ಟ್, ಮಕ್ಕಳ ಸಾಹಿತ್ಯ (5–10 ವರ್ಷಗಳು)

ಮೆಹ್ಲಿ ಗೋಭಾಯ್ ಪ್ರಶಸ್ತಿ ಮಕ್ಕಳ ಚಿತ್ರ ಪುಸ್ತಕ ಅತ್ಯುತ್ತಮ ಇಲ್ಲಸ್ಟ್ರೇಷನ್ (ಶಾರ್ಟ್ ಲಿಸ್ಟ್)





# ಇದನ್ನು ಸಾಧ್ಯವಾಗಿಸಿದವರ ನೆನೆಯುತ್ತ

APRAAVA ENERGY

ಢೂಂಢ been
Read Imagine Explore
AN INITIATIVE OF H T PAREKH FOUNDATION

EBARA
EBARA ELLIOTT ENERGY

H T Parekh FOUNDATION

infoedge

P·A·N·I Foundation
giving hope a chance

parag
AN INITIATIVE OF TATA TRUSTS

U · S T

Wildlife Conservation Trust

[e] enphase ENERGY

# FINANCIAL DECLARATION

Donors List consisting of donations received more than Rs. 50,000 in the year as well as Major Donors supported projects implemented during the year

| | Name of the Donors |
|---|---|
| | Rohini Nilekani Philanthropies Foundation |
| | Caterpillar India Engineering Solutions Private Limited |
| | HT Parekh Foundation |
| | King Baudouin Foundation |
| | UK Online Giving Foundation |
| | Ashajyothi USA Inc |
| | Infoedge India Limited |
| | Shopify Commerce India Private Limited |
| | Wildlife Conservation Trust |
| | Enphase Solar Energy Private Limited |
| | Sir Dorabji Tata Trust |
| | United Way Bengaluru |
| | Elliott Ebara Turbomachinery India Pvt Ltd |
| | Kohima-Mariani Transmission Limited |
| Individual | Collis Ta'eed |
| | Nayara Energy Limited |

| | Name of the Donors |
|---|---|
| | Raay Foundation |
| Individual | Shweta Helen Robert |
| | Mayuresh Sharad Shirgoakar |
| | H & R Block India Private Limited |
| | The Online Giving Foundation |
| | Liferarian Association |
| Individual | Shubh Arambh Foundation |
| Individual | Balaji Radhakrishnan |
| Individual | Tarvinder Singh |

List of individual donors

## 2024-25ನೇ ಹಣಕಾಸು ವರ್ಷದ ಟ್ರಸ್ಟಿಗಳ ಮಂಡಳಿ

| ಹೆಸರು | ಸ್ಥಾನ | ಹಾಜರಾದ ಮಂಡಳಿಯ ಸಭೆಗಳ ಸಂಖ್ಯೆ | ಟ್ರಸ್ಟಿಗಳು ಪಡೆದ ಸಂಭಾವನೆ/ ಮರುಪಾವತಿಗಳು |
|---|---|---|---|
| ಅಶೋಕ್ ಕಾಮತ್ | ಟ್ರಸ್ಟಿ | 4 | ಶೂನ್ಯ |
| ಹರಿತ್ ನಾಗ್‌ಪಾಲ್ | ಟ್ರಸ್ಟಿ | 2 | ಶೂನ್ಯ |
| ಮೀನಾಕ್ಷಿ ರಮೇಶ್ | ಟ್ರಸ್ಟಿ | 1 | ಶೂನ್ಯ |
| ಎಂ ಎಸ್ ಶ್ರೀರಾಮ್ | ಟ್ರಸ್ಟಿ | 3 | ಶೂನ್ಯ |
| ಆರ್ ಶ್ರೀರಾಮ್ | ಚೇರ್ ಪರ್ಸನ್ ಮತ್ತು ಕಾರ್ಯನಿರ್ವಾಹಕ | 4 | ಶೂನ್ಯ |
| ಶ್ರೀಕಾಂತ್ ನಾದಮುನಿ | ಟ್ರಸ್ಟಿ | 4 | ಶೂನ್ಯ |
| ಸುರ್ಯೋನ್ ಸಿಂಘ್ | ಟ್ರಸ್ಟಿ | 4 | ಶೂನ್ಯ |

2024-25ನೇ ಹಣಕಾಸು ವರ್ಷದಲ್ಲಿ ಟ್ರಸ್ಟಿಗಳ ಮಂಡಳಿಯು ಜುಲೈ 10, 2024, ಸೆಪ್ಟೆಂಬರ್ 20, 2024, ಡಿಸೆಂಬರ್ 4, 2024 ಮತ್ತು ಮಾರ್ಚ್ 26, 2025ರಂದು 4 ಬಾರಿ ಸಭೆ ಸೇರಿದೆ. ಎಲ್ಲಾ ಮಂಡಳಿಯ ಸಭೆಗಳ ನಿಮಿಷಗಳನ್ನು ದಾಖಲಿಸಲಾಗಿದೆ ಮತ್ತು ವಿತರಿಸಲಾಗಿದೆ.

ಶ್ರೀಮತಿ ಪರ್ವಿನ್ ವರ್ಮಾ ಮಾರ್ಚ್ 26, 2025ರಂದು ಮಂಡಳಿಗೆ ರಾಜೀನಾಮೆ ನೀಡಿದರು.

Pratham Books

Balance sheet as at March 31, 2025

(Amount in Rupees)

| Particulars | Sch No. | As at March 31, 2025 Amount | As at March 31, 2024 Amount |
|---|---|---|---|
| Liabilities | | | |
| Own Funds | 1 | 12,46,50,623 | 11,47,17,119 |
| Specified Fund | 2 | 39,63,649 | 73,66,019 |
| Current Liabilities | 3 | 1,44,79,398 | 1,60,15,456 |
| Provisions | 4 | 43,31,243 | 46,26,718 |
| Other advances | 5 | 1,46,959 | 21,66,006 |
| Total | | 14,75,71,872 | 14,48,91,118 |
| Assets | | | |
| Fixed Assets | 6 | 20,40,055 | 19,80,392 |
| Deposits | 7 | 11,13,52,212 | 8,46,43,096 |
| Debtors | 8 | 44,26,783 | 24,79,991 |
| Loans and advances | 9 | 10,80,806 | 25,06,917 |
| Stock of Books | | 92,88,505 | 83,22,808 |
| Cash in Hand | | 29,099 | 15,762 |
| Cash at Bank | 10 | 1,88,44,153 | 4,44,69,456 |
| Specified Fund Receivable | 11 | - | 1,50,000 |
| Other Current Assets | 12 | 5,10,260 | 3,21,696 |
| Total | | 14,75,71,872 | 14,48,91,118 |

Significant Accounting Policies and notes to accounts 22

for Pratham Books

R Sriram
Chairperson

Ashok R Kamath
Trustee

Bengaluru
September 24, 2025

As per our report of even date
for Singhvi Dev & Unni LLP
Chartered Accountants
Firm Reg No 003867S/ S200136

Shashi Kumar H D
Partner
Membership No.: 235431
UDIN: 25235431BMLABR2342

Bengaluru
September 24, 2025

## Pratham Books

### Income & Expenditure for the year ended March 31, 2025

*(Amount in Rupees)*

| Particulars | Sch No. | For the period from 1st April 2024 to 31st March 2025 | For the period from 1st April 2023 to 31st March 2024 |
|---|---|---|---|
| **Income** | | | |
| Sale of Books | 13 | 5,05,96,400 | 6,18,87,671 |
| Donations received | 14 | 5,11,70,541 | 50,15,192 |
| Other Income | 15 | 50,89,671 | 67,73,563 |
| Income from Funds | 16 | 2,02,27,098 | 4,63,99,569 |
| Total (A) | | 13,20,89,811 | 14,74,25,727 |
| **Expenditure** | | | |
| Book Development & StoryWeaver Expenses | 17 | 5,04,74,020 | 2,91,23,257 |
| Selling & Administrative Expenses | 18 | 2,57,86,436 | 2,27,31,803 |
| Staff Expenses | 19 | 3,14,83,774 | 3,69,18,922 |
| Promotional Expenses | 20 | 6,43,438 | 2,47,544 |
| Depreciation | 4 | 5,97,799 | 5,07,823 |
| Fund Expenditure | 21 | 3,14,79,488 | 8,87,17,139 |
| Total (B) | | 14,04,04,077 | 17,67,46,500 |
| Excess of Income over expenditure (A-B) | | 56,81,134 | (2,88,70,773) |
| Add: | | | |
| **Opening Balance in Funds** | | | |
| Opening Balance in Corpus Fund | | 11,47,17,121 | 10,11,38,543 |
| Opening Balance in Specified Fund | | 73,66,019 | 5,03,21,392 |
| **Balance of Funds after appropriations** | | | |
| Corpus Fund | | 12,46,55,024 | 11,47,17,120 |
| Specified Fund | | 39,03,249 | 73,66,019 |
| Total balance in Funds | | 12,86,14,279 | 13,23,83,139 |

Significant Accounting Policies and notes to accounts 22

for Pratham Books

R Sriram
Chairperson

Ashok R Kamath
Trustee

As per our report of even date
for Singhvi Dev & Unni LLP
Chartered Accountants
Firm Reg No 003867S/ S000093

Shashi Kumar H D
Partner
Membership No.: 233401
UDIN: 25233401BMLA0F2342

Bengaluru
September 24, 2025

Bengaluru
September 24, 2025

## Pratham Books

### Receipts and Payments account for the year ended March 31, 2025

*(Amount in Rupees)*

| Particulars | Sch no. | Year ended March 31, 2025 Amount | Year ended March 31, 2024 Amount |
|---|---|---|---|
| **Receipts** | | | |
| Balance brought forward | | | |
| - Cash on hand | | 13,763 | 13,440 |
| - Cash at bank | | 4,44,09,456 | 5,95,10,284 |
| Sale of Books | | 6,46,31,778 | 8,99,95,514 |
| Donations | | 5,11,70,541 | 50,15,193 |
| Other Income | | 37,92,201 | 57,68,026 |
| Specified Funds | | 1,03,27,098 | 4,68,22,561 |
| Fixed Deposits - Withdrawn | | 14,45,08,984 | 19,93,61,228 |
| Gratuity Fund (LIC) | | 2,40,943 | 1,40,213 |
| Income Tax Refund - Received (TDS) | | 14,27,910 | - |
| Total | | 34,06,70,714 | 40,38,06,073 |
| **Payments** | | | |
| Book Development Expenses | | 5,11,34,076 | 2,88,14,513 |
| Selling, Administrative Expenses and Promotional Expenses | | 1,65,72,883 | 2,23,51,148 |
| Staff Expenses | | 3,14,23,040 | 2,94,13,621 |
| Fund Expenditure | | 3,17,34,689 | 9,14,41,364 |
| Fixed assets Purchased | | 3,47,402 | 3,26,900 |
| Fixed Deposits | | 17,10,35,381 | 18,78,17,567 |
| Gratuity LIC Policy | | 8,00,000 | 10,00,000 |
| Specific Grant Balance Refund | | - | 1,75,000 |
| Earnest Money/Security Deposit | | 5,70,000 | - |
| Balance carried forward | | | |
| - Cash on hand | | 79,099 | 13,763 |
| - Cash at bank | | 1,08,64,153 | 4,44,09,456 |
| Total | | 34,06,70,714 | 40,38,06,073 |

Significant Accounting Policies and notes to accounts 22

for Pratham Books

R Sriram
Chairperson

Ashok R Kamath
Trustee

As per our report of even date
for Singhvi Dev & Unni LLP
Chartered Accountants
Firm Reg No 003867S/S000093

Shashi Kumar H D
Partner
Membership No.: 233401
UDIN: 25233401BMLA0F2342

Bengaluru
September 24, 2025

Bengaluru
September 24, 2025

# ಇಲ್ಲಸ್ಟ್ರೇಷನ್ಸ್ ಕೃಪೆ

| ಶೀರ್ಷಿಕೆ | ಚಿತ್ರಕಾರರು | ಲೇಖಕರು |
|---|---|---|
| ಪುಸ್ತಕಗಳಿಂದ ತುಂಬಿದ ಮನೆ | ಐಂದ್ರಿ ಸಿ | ಜೈರಾಜ್ ಸಿಂಘ್ |
| ಚಂದ್ರನ ತುಂಬಾ ಇರುವೆ | ಪ್ರಿಯಾ ಕುರಿಯನ್ | ಅಪರ್ಣಾ ಕಪೂರ್ |
| ಕಪ್ಪುರಂಧ್ರದ ಅಂಚಿನಲ್ಲಿ... | ಛಾಯಾ ಪ್ರಭಾತ್ | ಅನನ್ಯಾ ದಾಸಗುಪ್ತಾ |
| ಡೈನೋಸಾರ್‌ಗಳ ಲೋಕ | ಗಿನಾ ಜೇಮ್ಸ್ | ಅಂಜಲಿ ಅಲಪ್ಪತ್ |
| ಕಬಡ್ಡಿ | ಕಬಿನಿ ಅಮೀನ್ | ಕಬಿನಿ ಅಮೀನ್ |
| ಅದೇ ಆಕಾಶದ ಕೆಳಗೆ ಅದೇ ಕನಸು | ಓಗಿನ್ ನಯಮ್ | ಫೌಸ್ಟೊ ಆರ್ಯ ದೆ ಸಾಂತಿಸ್ |
| ಅವರಲ್ಲ ಇವರಲ್ಲ ಮತ್ತೆ ಯಾರು? | ಡೇವಿಡ್ ಯಾಂಬೆಮ್ | ಪಾರೋ ಆನಂದ್ |
| ಡಾರ್ಡಲ್‌ಗಳ ಇಂಧನ ಉಳಿತಾಯ | ಐಂದ್ರಿ ಸಿ | ಸಿ ಜಿ ಸಲಾಮಾಂಡರ್ |
| ಬೂದುಬಣ್ಣ ನನಗಿಷ್ಟ | ಕನಾಟೊ ಜಿಮೊ | ಕನಾಟೊ ಜಿಮೊ |
| ನಾವು ಬಯಸುವುದು ಏನೆಂದರೆ... | ಗೀತಾಂಜಲಿ ದಾಸ್, ಜಾಪಾನಿ ಶ್ಯಾಮ್, ಕಾಮ್ತಾ ಕಮ್ತಾ ತಾಹೇಡ್, ಕೃತಿಕಾ ಜೋಶಿ, ಲಡೋಬಾಯಿ ಮತ್ತು ಮಿನಾಕ್ಷಿ ವಾಯೇದಾ | |

ಈ ವರದಿಯನ್ನು ಚೆಂದವಾಗಿ ದೃಶ್ಯೀಕರಿಸಿದ್ದಕ್ಕೆ ಕೆನಾಟೊ ಜಿಮೊಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.







PRATHAM BOOKS

A Book in Every Child's Hand

House No. 333, First Floor,
4th Cross OMBR Layout,
Banaswadi
T: 80- 42052574 / 4115 9009

www.prathambooks.org
www.storyweaver.org.in
www.donateabook.org.in